# 10

# “ಸತ್ಯದ ಹೊರತು ಮತ್ತೇನಿಲ್ಲ”

## (1 ಅರಸು 22)

ಕೆಲ ಸಂಗತಿಗಳು ಸತ್ಯಕ್ಕಿಂತ ಅತಿ ಪ್ರಮುಖವಾದವುಗಳು ಆಗಿರುತ್ತವೆ. “ನೀವು ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು” (ಯೋಹಾನ 8:32) ಎಂದು ಯೇಸು ಹೇಳಿದನು. “ಸತ್ಯವನ್ನು ಎಂದರೆ ಜ್ಞಾನ ಸುಶಿಕ್ಷೆ ವಿವೇಕ ಗಳನ್ನು ಕೊಂಡುಕೋ ಮಾರಿಬಿಡಬೇಡ” (ಜ್ಞಾನೋಕ್ತಿ 23:23) ಎಂದು ಬುದ್ಧಿವಂತ ಮನುಷ್ಯನು ಹೇಳುತ್ತಾನೆ. ಸತ್ಯವನ್ನು ಕಲಿಯಲು ನಾವು ಬೆಲೆಯನ್ನು ಮತ್ತು ಶಕ್ತಿಯನ್ನು ತೆತ್ತಬೇಕು; ಮತ್ತು ಒಂದು ಸಾರಿ ಅದನ್ನು ಪಡೆದರೆ ಏನೇ ಬಂದರೂ, ನಾವು ಅದನ್ನು ನಮ್ಮಲ್ಲಿ ಇಟ್ಟುಕೊಳ್ಳಬೇಕು!

ಈ ಪಾಠದಲ್ಲಿ ನಾವು ಮಹತ್ವವಾದಂತೆ ಇರುವ ಸಾಮಾನ್ಯವಾದ ಸತ್ಯದೆಡೆಗೆ ನಾವು ಗಮನಹರಿಸುವುದಿಲ್ಲ, ಆದರೆ ಬದಲಾಗಿ ದೇವರಿಂದ ಬಿಡುಗಡೆಯಾದ ಸತ್ಯದೆಡೆಗೆ ಗಮನಹರಿಸುವವರಾಗಿದ್ದೇವೆ. ಯೇಸು ತಂದೆಗೆ “ನಿನ್ನ ವಾಕ್ಯವೇ ಸತ್ಯವು” (ಯೋಹಾನ 17:17) ಎಂದು ಹೇಳಿದನು. “ನೀನು ದೇವರಾಗಿರುತ್ತಿ; ನಿನ್ನ ವಾಕ್ಯವು ಸತ್ಯವಾದದ್ದು” (2 ಸಮುವೇಲ 7:28) ಎಂದು ದಾವೀದನು ಹೇಳಿದನು. ಕೀರ್ತನೆ 119ರಲ್ಲಿ ಲೇಖಕನು ದೇವರ ವಾಕ್ಯಗಳು ಸತ್ಯವೆಂದು ಒತ್ತಿಹೇಳುತ್ತಾನೆ: “... ನಿನ್ನ ನಿಭಂದನೆಗಳನ್ನು ಸತ್ಯವಾದವುಗಳು ... ನಿನ್ನ ಎಲ್ಲಾ ಆಜ್ಞೆಗಳು ಸತ್ಯವಾದವುಗಳು” (ವಚನಗಳು 142, 151, 160).

ದೇವರು ತನ್ನ ಚಿತ್ತವನ್ನು ಸತ್ಯವೇದದಲ್ಲಿ ನಮಗೆ ಕೊಟ್ಟಿದ್ದಾನೆ. ಅದರ ಮೂಲಕ ನಮ್ಮನ್ನು ಬಿಡುಗಡೆ ಮಾಡುವೆ ಸತ್ಯವನ್ನು ನಾವು ತಿಳಿದುಕೊಳ್ಳಬೇಕು: ಆತನು ತನ್ನ ಬಗೆಗೆ ಮತ್ತು ತನ್ನ ಮಗನ ಬಗೆಗೆ, ಮಾನವ ಮತ್ತು ಪಾಪದ ಬಗೆಗಿನ ಸತ್ಯವನ್ನು, ರಕ್ಷಣೆ ಮತ್ತು ಕ್ರೈಸ್ತೀಯ ಜೀವಿತದ ಬಗೆಗಿನ ಸತ್ಯವನ್ನು, ಪರಲೋಕ ಮತ್ತು ನರಕದ ಬಗೆಗಿನ ಸತ್ಯವನ್ನು ನಮಗೆ ಕೊಟ್ಟಿದ್ದಾನೆ.

ಇಲ್ಲಿರುವ ಪ್ರಶ್ನೆ ಎಂದರೆ, ಸತ್ಯದೊಂದಿಗೆ ನಾವೇನನ್ನು ಮಾಡಬಹುದು? ಹೀಗೆ ಸತ್ಯದೊಡನೆ ನಮಗೆ ಮಾಡಲು ನೂರಾರು ಸಂಗತಿಗಳಿವೆ. ನಾವು ಅದನ್ನು ಹುಡುಕಬೇಕು (ಯೆರಮೀಯ 5:1). ನಾವು ಇದನ್ನು ನಂಬಬೇಕು ಮತ್ತು ಗ್ರಹಿಸಬೇಕು (1 ತಿಮೊಥೆ 4:3). ನಾವು ಅದಕ್ಕೆ ವಿಧೇಯರಾಗಬೇಕು (1 ಪೇತ್ರ 1:22). ನಾವು ಅದನ್ನು ಮಾತನಾಡಬಹುದು (ಜೆಕರ್ಯ 8:16; ಎಫೆಸ 4:15). ನಾವು ಅದರಲ್ಲಿ ನಡೆಯಬಹುದು (1 ಅರಸು 2:4; 3:6; ಕೀರ್ತನೆ 86:11). ನಾವು ಅದನ್ನು ಅಭ್ಯಾಸ ಮಾಡಬಹುದು (ಯೋಹಾನ 3:21; 1 ಯೋಹಾನ 1:6) ಅದನ್ನು ನಾವು ಬೆಂಬಲಿಸಬಹುದು (1 ತಿಮೊಥೆ 3:15).

ಇನ್ನೊಂದೆಡೆಯಲ್ಲಿ ನಾವು ಸತ್ಯವನ್ನು ಗೌಪ್ಯವಾಗಿಡಬಹುದು (ಕೀರ್ತನೆ 40:10). ನಾವು ಅದನ್ನು ಅಡಗಿಸಬಹುದು (ರೋಮಾಪುರ 1:18). ನಾವು ಅದನ್ನು ಸುಳ್ಳಿಗೆ ಬದಲಾಯಿಸಬಹುದು (ರೋಮಾಪುರ 1:25). ಅದಕ್ಕೆ ವಿಧೇಯರಾಗುವುದನ್ನು ನಾವು ನಿರಾಕರಿಸಬಹುದು (ರೋಮಾಪುರ 1:28; ಗಲಾತ್ಯ 5:17). ಅದನ್ನು ವಿರೋಧಿಸಬಹುದು (2 ತಿಮೊಥೆ 3:8). ನಾವು ಅದರಿಂದ ಮುಖ ತಿರುಗಿಸಬಹುದು (2 ತಿಮೊಥೆ 4:4; ತೀತ 1:4).

ಸತ್ಯವು ಆಹಾಬನನ್ನು ಹಿಡಿದಾಗ ಆತನು ಹೇಗೆ ನಿರಾಕರಿಸಿದನು ಎಂಬುದನ್ನು ಮೊದಲ ಅರಸು 22 ತೋರಿಸುತ್ತದೆ. ನಾವು ಉತ್ಕೃಷ್ಟವಾದ ಫಳಿಗೆಯನ್ನು ಪಡೆಯುವ

ಮುನ್ನ, ಹೇಗೋ, ಸತ್ಯವು ಉಪಯೋಗಿತವಾದುದನ್ನೂ, ಅನುಪಯೋಗಿತವಾದುದನ್ನೂ, ಮತ್ತು ಹಿಯಾಳಿಸಿದ್ದನ್ನು ನಾವು ನೋಡುತ್ತೇವೆ. ಬೈಬಲಿನೆಡೆಗೆ ನಮ್ಮ ಮನೋಭಾವನೆ ಮತ್ತು ಸತ್ಯವನ್ನು ನಿರ್ಲಕ್ಷಿಸುವ ಮತ್ತು ನಿರಾಕರಿಸುವ ಸಂಗತಿಗಳ ಶಕ್ತಿಯುತವಾದ ಪಾಠಗಳು ಈ ಅಧ್ಯಾಯದಲ್ಲಿ ಕಂಡುಬರುತ್ತವೆ.

ಅದ್ಭುತವಾದ ಭಾವನೆಯು ವಚನ 16ರಲ್ಲಿ ಕಂಡುಬರುತ್ತದೆ: "*ಸತ್ಯವನ್ನೇ ತಿಳಿಸಬೇಕೆಂದು* ಯೆಹೋವನ ಹೆಸರಿನಲ್ಲಿ ನಿನ್ನಿಂದ ಎಷ್ಟು ಸಾರಿ ಪ್ರಮಾಣಮಾಡುತ್ತೇನೆ." ದುರ್ದೈವವಶಾತ್ ಈ ಮಾತುಗಳು ಸತ್ಯದೊಂದಿಗೆ ಆಟವಾಡುತ್ತಿರುವ ಮನುಷ್ಯನ ಬಾಯಿಯಿಂದ ಬಂದಂತವುಗಳು ಆಗಿದ್ದವು.

## ನಾವು ಸತ್ಯದೊಂದಿಗೆ ಆಟವನ್ನು ಆಡಬಹುದು (22:1-17)

ನಮ್ಮಲ್ಲಿರುವ ಅನೇಕರಿಗೆ "ನಿಮಗೆ ಸತ್ಯವು ಬೇಕೋ?" ಎಂದು ನಾವು ಕೇಳಿದಾಗ ಖಡಾಖಂಡಿತದೊಡನೆ ಅವರು "ಹೌದು" ಎಂದು ಉತ್ತರಿಸುವರು! ಹೇಗೋ, ನಾವು ಸತ್ಯಕ್ಕಾಗಿ ಅಷ್ಟೊಂದು ಕಾತರಿಸುವಂತದ್ದಾಗಿರುತ್ತದೆ. 1964ರಲ್ಲಿ, ಎರಿಕ್ ಬೆರ್ನೆ ಅವರು ಮಾನವನ ಸಂಬಂಧಗಳ ಮಾನಶಾಸ್ತ್ರದ ಮೇಲಿನ *ಜನರು ಆಡುವ ಆಟಗಳು,* ಎಂಬ ಪುಸ್ತಕವನ್ನು ಬರೆದರು. ಜನರು ಸತ್ಯದೊಡನೆ ಆಟವಾಡುತ್ತಾರೆ. 22ನೇಯ ಅಧ್ಯಾಯದ ಮೊದಲ ಭಾಗವು ಜನರು ಆಡುವ ಆಟದ ಉದಾಹರಣೆಯೊಡನೆ ತುಂಬಿದೆ.

### "ರಾಜಿಯ" ಆಟ

ದೈವಭಕ್ತನಾದ ಅರಸನು "ರಾಜಿಯ" ಆಟವನ್ನು ಆಡಿದನು.

> ಮೂರು ವರುಷಗಳವರೆಗೆ ಇಸ್ರಾಯೇಲ್ಯರಿಗೂ ಅರಾಮ್ಯಾರಿಗೂ ಯುದ್ಧ ನಡೆಯಲಿಲ್ಲ. ಮೂರನೆಯ ವರುಷದಲ್ಲಿ ಯೆಹೂದ್ಯರ ಅರಸನಾದ ಯೆಹೋಷಾಫಾಟನು ಇಸ್ರಾಯೇಲ್ಯರ ಅರಸನ ಬಳಿಗೆ ಬಂದನು (ವಚನಗಳು 1, 2).

ಇದೊಂದು ಗಮನಾರ್ಹವಾದ ಘಟನೆಯಾಗಿದೆ. ದಾಖಲೆಗಳು ದೂರ ಹೋದಂತೆಲ್ಲ, ಯುದ್ಧಭೂಮಿಯನ್ನು ಬಿಟ್ಟು ಬೇರೆಡೆಯಲ್ಲಿ ಯುದಾಯದ ಅರಸನು ಇಸ್ರಾಯೇಲ್ಯರನ್ನು ಅರಸನನ್ನು ಭೇಟಿಯಾದಂತದ್ದು ಇದೇ ಮೊದಲ ಸಾರಿ ಆಗಿದೆ.[1] ಯೆಹೋಷಾಫಾಟನು ಆಹಾಬನನ್ನು ಕಾಣಲು ಇರುವ ಎಲ್ಲಾ ಕಾರಣಗಳನ್ನು ನಾವರಿಯೆವು, ಆದರೆ ಪೂರ್ವಕಾಲವೃತ್ತಾಂತದ ಲೇಖಕರನು[2] ಈ ಭೇಟಿಯ ಮೊದಲು ಅನೇಕ ವರ್ಷಗಳ ಹಿಂದೆ ನಡೆದ ಘಟನೆಗಳನ್ನು ಜೋಡಿಸುವವನಾಗಿದ್ದಾನೆ. "ಯೆಹೋಷಾಫಾಟನು ... ಆಹಾಬನೊಡನೆ ಬೀಗತನ[3] ಮಾಡಿದನು" (2 ಪೂರ್ವಕಾಲವೃತ್ತಾಂತ 18:1). ಒಂಬತ್ತು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಮುಂಚೆ, ಯೆಹೋಷಾಫಾಟನ ಮಗ, ಯೆಹೋರಾಮನು, ಆಹಾಬ ಮತ್ತು ಈಜೆಬೆಲಳ ಮಗಳಾದ ಅಥಲ್ಯೈಹ್ಯಳನ್ನು ಮದುವೆ ಯಾಗಿದ್ದನು.[4]

1 ಅರಸು 22ನೇಯ ಅಧ್ಯಾಯದ ನಂತರದ ಭಾಗದಲ್ಲಿ, ಯೆಹೋಶಾಫಾಟನ ಜೀವನದ ಕಡಿಮೆ ಅಂಶಗಳು ಪಟ್ಟಿಯಾಗಿವೆ, ಮೊದಲ ಮೂಲ ಮಂತ್ರವು "ಇವನು ಇಸ್ರಾಯೇಲ್ಯರ ಅರಸನೊಡನೆ ಸಮಾಧಾನದಿಂದಿದ್ದನು" (ವಚನ 44). ಯೆಹೋ ಶಾಫಾಟನು ಪರಿಪೂರ್ಣನಾಗಿರಲಿಲ್ಲ, ಆದರೆ "ಆತನು ಯುದಾಯದ ಶ್ರೇಷ್ಟ ಅರಸರಲ್ಲಿ ಒಬ್ಬನಾಗಿದ್ದನು; ಇವನು ತಪ್ಪದೆ ತಂದೆಯಾದ ಆಸನ ಮಾರ್ಗದಲ್ಲಿ ನಡೆಯುತ್ತಾ ಯೆಹೋವನ ದೃಷ್ಟಿಯಲ್ಲಿ ಒಳ್ಳೆಯವನಾಗಿದ್ದನು" (ವಚನ 43).[5] ಇಸ್ರಾಯೇಲಿನ ಅರಸನಾದ ಆಹಾಬನು ಬಲು ಅಧಾರ್ಮಿಕ ಜೀವನವನ್ನು ಹೊಂದಿದ್ದಕ್ಕೂ ಯೆಹೋಶಾಫಾಟನ ಧೈವೀಕ ಜೀವನಕ್ಕೂ

ಬಲು ವ್ಯತ್ಯಾಸವಿದೆ (1 ಅರಸು 16:33). ಇದಲ್ಲದೆ ಯೆಹೋಶಾಫಾಟನ ಸಮಾಧಾನವು ಬಲು ಮಹತ್ವವಾದುದು ಎಂದು ನಂಬಿದವನಾಗಿದ್ದನು. ಹೀಗೆ ಆತನು ತನ್ನ ಮಗನ ಮತ್ತು ಆಹಾಬನ ಮಗಳ ಮಧ್ಯದ ಮದುವೆಗೆ ಒಪ್ಪಿಗೆ ನೀಡಿದ್ದನು.[6] ಆತನೂ ಸಹ ಆಹಾಬನೊಡನೆ ಜೀಗತನವನ್ನು ಮಾಡಿದ್ದನು.

ಯೆಹೋಶಾಫಾಟನ ಪ್ರೇರಣೆಯು ಉನ್ನತವಾದದ್ದು ಎಂಬುದರಲ್ಲಿ ಸಂಶಯವಿಲ್ಲ. ಆತನ ಸಮಾಧಾನವು ಬಹುಶಃ ಇಬ್ಬರಿಗೂ ಲಾಭದಾಯಕವಾದದ್ದು ಮತ್ತು ಆ ಎಲ್ಲಾ ಸಮಯದಲ್ಲಿ ತಾನು ಇಸ್ರಾಯೇಲಿನ ಬಹಿಷ್ಕರಿಸಲ್ಪಟ್ಟ ಅಧಾರ್ಮಿಕ ಮಾರ್ಗಗಳ ಮೇಲೆ ಪ್ರಭಾವ ಬೀರುತ್ತ ಇರಬಹುದು ಎಂದು ಯೋಚಿಸಿರಬಹುದು. ಹೇಗೂ, ಆತನೇನು ಮಾಡಿದನೋ ಅದು ತಾತ್ವಿಕವಾಗಿ ತಪ್ಪಾಗಿತ್ತು, ಅಭ್ಯಾಸದಲ್ಲಿ ಸಂಹಾರಕಾರಿಯಾಗಿತ್ತು,[7] ಮತ್ತು ಹೆಚ್ಚು ಕಡಿಮೆ ಅದರ ಸಂಗತಿಗಳಲ್ಲಿ ಮಾರಕವಾದದ್ದು ಆಗಿತ್ತು.[8] ಸಮಾಧಾನವು ಇಚ್ಚಿತವಾಗಿತ್ತು, ಆದರೆ ಸತ್ಯದೊಡನೆ ರಾಜಿಯಾಗದೇ ಇರುವುದೇ ಅಲ್ಲಿ ಅವಶ್ಯವಿತ್ತು.[9] ಬುದ್ಧಿವಂತನು ಹೀಗೆ ಹೇಳಿದನು, "ಸತ್ಯವನ್ನು ಕೊಂಡುಕೋ ಅದನ್ನು ಮಾರಬೇಡ" ಎಂಬುದಾಗಿ (ಜ್ಞಾನೋಕ್ತಿ 23:23)! ಸಮಾಧಾನಕ್ಕೋಸ್ಕರ ಸತ್ಯವನ್ನು ಎಂದಿಗೂ ಮಾರಬೇಡ; ಇದಕ್ಕೆ ಬಲು ಉನ್ನತ ವಾದ ಬಲೆಯು ಇದೆ.

ಯೆಹೋಶಾಫಾಟನು ಸಮಾರ್ಯಕ್ಕೆ ಹೋದಾಗ, ಆಹಾಬನು ಅವನಿಗೋಸ್ಕರ ಉನ್ನತ ವಾದ ಔತಣಕೂಟವನ್ನು ಏರ್ಪಡಿಸಿದನು "ಅವನಿಗೋಸ್ಕರ ಅನೇಕ ದನಕುರಿಗಳನ್ನು ವಧಿಸಿ ಔತಣವನ್ನು ಮಾಡಿದನು" (2 ಪೂರ್ವಕಾಲವೃತ್ತಾಂತ 18:2). ಔತಣಕೂಟದ ಮಧ್ಯದಲ್ಲಿ, ಆಹಾಬನು ಯೋರ್ಧನ ಆಚೆಗಿರುವ ಪಟ್ಟಣಗಳ ಬಗೆಗೆ ಹಾಗೇಯೇ ಮಾತನಾಡಲು ಆರಂಭಿಸಿದನು "ನಿನಗೆ ಗೊತ್ತೇ, ರಾಮೋತ್ ಗಿಲ್ಯಾದು ನಮಗೆ ಸೇರಿದ್ದು, ಮತ್ತು ನಾವು ಅದನ್ನು ಆರಾಮ್ಯರ ಅರಸನ ಕೈಯಿಂದ ಪಡೆಯಲು ಇನ್ನೂ ಏನೂ ಮಾಡುತ್ತಿಲ್ಲ" (ವಚನ 3) ಎಂದು ಹೇಳಿದನು. ಆಹಾಬನು ಯೆಹೋಷಾಫಾಟನಿಂದ ಪ್ರಯೋಜನವನ್ನು ಪಡೆಯಲು ಮಾತನಾಡುತ್ತಿದ್ದಾನೆ, ಆದರೆ ಆತನು "ಆತನ ಸೇವಕರ ಜೊತೆಗೆ ಮಾತನಾಡುತ್ತಾನೆ." ಆತನು ಇಲ್ಲಿ ಆಟವನ್ನು ಆಡುತ್ತಿದ್ದಾನೆ.

ರಾಮೋತ್ ಗಿಲ್ಯಾದ್ ಇದರ ಅರ್ಥವು "ಗಿಲ್ಯಾದಿನಲ್ಲಿರುವ ರಾಮೋತ್" ಎಂಬರ್ಥವನ್ನು ಕೊಡುತ್ತದೆ. ಗಿಲ್ಯಾದು ಪೂರ್ವಯೋರ್ದನ ಪ್ರದೇಶದಲ್ಲಿನ ಅಸಂಸ್ಕೃತ ಪ್ರದೇಶವಾಗಿದ್ದು ಎಲೀಯನ ತವರು ಪ್ರದೇಶವಾಗಿತ್ತು.[10] ರಾಮೋತ್ ಗಿಲ್ಯಾದ್ ಗೋಡೆಗಳುಳ್ಳ ಪಟ್ಟಣವಾ ಗಿದ್ದು. ಸೀಮಾರೇಖೆಯ ಕೋಟೆಯನ್ನು ಅದು ಹೊಂದಿತ್ತು. ಇದು ಪೂರ್ವದ ಯೋರ್ದನಿನ ಭಾಗದಿಂದ ಇಸ್ರಾಯೇಲನ್ನು ತಲುಪಲು ಇರುವ ಉನ್ನತವಾದ ಬಲಯುತವಾದ ರೀತಿಯಲ್ಲಿ ಇದು ಕೌಶಲ್ಯಮಯವಾಗಿ ಅಸ್ತಿತ್ವಗೊಂಡಿದೆ. ಈಗ ಹೇಗೋ, ಸಿರಿಯನ್ ಸೈನಿಕದಳದಿಂದ ನಿಯಂತ್ರಿಸಲ್ಪಟ್ಟಿದ್ದು ಮತ್ತು ಇಸ್ರಾಯೇಲಿಗೆ ನಿರಂತರವಾದ ಬೆದರಿಕೆಯನ್ನು ಒಡ್ಡುತ್ತಾ ಇತ್ತು. ಸಾಂದರ್ಭಿಕವಾಗಿ, ಬೆನ್ಹದದನು ಸಿರಿಯಾದ ಅರಸನಾಗಿದ್ದು, ಆಹಾಬನಿಗೆ "ಸಹೋದರ" ಎಂಬ ಪರ್ಯಾಯನಾಮವನ್ನು ಕಾಯ್ದುಕೊಳ್ಳಲಿಲ್ಲ ಎಂಬುದನ್ನು ನಾವು 1 ಅರಸು 20:34ರಲ್ಲಿ ಹೇಳುವುದನ್ನು ನೋಡುತ್ತೇವೆ.

ನಂತರ ಆಹಾಬನ ಯೆಹೋಷಾಫಾಟನ ಜೊತೆ ನೇರವಾಗಿ "ನನ್ನ ಜೊತೆ ರಾಮೋತ್ ಗಿಲ್ಯಾದಿಗೆ ಬರುತ್ತಿಯೋ?" ಎಂದು ಮಾತನಾಡಿದನು. ಆಗ ಯೆಹೋಶಾಫಾಟನು ಸ್ವಲ್ಪವೂ ನಿರಾಕರಣೆಯಿಲ್ಲದೆ "ನಾನೂ ನೀನೂ ನನ್ನ ಜನರೂ ನಿನ್ನ ಜನರೂ, ನನ್ನ ಕುದುರೆಗಳೂ ನಿನ್ನ ಕುದುರೆಗಳೂ ಒಂದೇಯಲ್ಲವೋ" (1 ಅರಸು 22:4) ಎಂದು ಉತ್ತರಿಸಿದನು. ಪೂರ್ವದಲ್ಲಿ "ನಾವು ಜೊತೆಯಾಗಿ ಹೋಗುವ" ಎಂದು ಹೇಳುವುದಕ್ಕೆ ಇದು ಒಂದು ರೀತಿ ಯಾಗಿತ್ತು. ಪೂರ್ವಕಾಲವೃತ್ತಾಂತವು ಇಲ್ಲಿ "ನಿನ್ನ ಜೊತೆಯಲ್ಲಿ ಯುದ್ಧಕ್ಕೆ ಬರುವೆವು" (2 ಪೂರ್ವಕಾಲವೃತ್ತಾಂತ 18:3).

ಯೆಹೋಷಾಫಾಟನು ಆಹಾಬನೊಡನೆ ಯಾಕೆ ಯುದ್ಧಕ್ಕೆ ಹೋಗಲು ಒಪ್ಪಿದನು? ಬಹುಶಃ ಇದು ಯುದಾಯ ಮತ್ತು ಇಸ್ರಾಯೇಲಿನ ಮಧ್ಯದ ಐಕ್ಯತೆಯನ್ನು ಮುಂದೆ ಬೆಳೆಸಿತು. ಬಹುಶಃ ರಾಮೋತ್ ಗಿಲ್ಯಾದ್ ಯೆರೂಸಲೇಮಿನಿಂದ ಕೇವಲ ನಾಲ್ವತ್ತು ಮೈಲಿ ದೂರವಿರುವದರಿಂದ, ಸಿರಿಯನ್ ಉದ್ಯೋಗದ ಕಾರಣ ರಾಮೋತ್ ಗಿಲ್ಯಾದ್ ಸಹ ಯೂದಾಯಕ್ಕೆ ಭಯವನ್ನು ಹುಟ್ಟಿಸಿತ್ತು. ಇದು ಬಹುಶಃ ಆಹಾಬನು ಒಬ್ಬ ಒಳ್ಳೆಯ ಮಾರಾಟಗಾರನಾಗಿರುವ ಕಾರಣದಿಂದಲೇ ಇರಬಹುದು. ಎರಡನೆಯ ಪೂರ್ವಕಾಲವೃತ್ತಾಂತ 18 ಹೇಳುವುದೇನೆಂದರೆ "ಆತನು (ಆಹಾಬ) *ತನ್ನ ಸಂಗಡ* ರಾಮೋತ್ ಗಿಲ್ಯಾದಿಗೆ ಬರಬೇಕೆಂದು ಪ್ರೇರೇಪಿಸಿದನು" (ವಚನ 2; ಒತ್ತಿ ಹೇಳಿದ್ದು ನನ್ನದು). ಕಾರಣವು ಏನೇ ಆಗಿರಲಿ, ದೇವರು ಇದರಿಂದ ಸಂತುಷ್ಟನಾಗಲಿಲ್ಲ. ಮುಂದೆ ಯೆಹೋಷಾಫಾಟನು ಯುದ್ಧದಿಂದ ಮನೆಗೆ ಹಿಂತಿರುಗಿದ ನಂತರ, ಆತನು ದೇವರ ಪ್ರವಾದಿಯಿಂದ ಸಂಧಿಸಲ್ಪಟ್ಟನು:

> ಅವನು ಯೆರೂಸಲೇಮಿಗೆ ಬರಲು ಹನಾನೀಯನ ಮಗನಾದ ಯೇಹೂ ಎಂಬ ದರ್ಶಿಯು ಅವನನ್ನು ಎದುರುಗೊಂಡು ಅವನಿಗೆ - ನೀನು ಕೆಟ್ಟವನಿಗೆ ಸಹಾಯಮಾಡತಕ್ಕದ್ದೋ? ಯೆಹೋವನ ಹಗೆಗಾರನನ್ನು ಪ್ರೀತಿಸುವದೋ! ನೀನು ಹೀಗೆಮಾಡಿದ್ದರಿಂದ ಯೆಹೋವನ ಕೋಪವು ನಿನ್ನ ಮೇಲಿರುತ್ತದೆ (2 ಪೂರ್ವಕಾಲವೃತ್ತಾಂತ 19:2).

ಯಾರಾರು ಕೆಟ್ಟತನದ ಜೊತೆ ತಮ್ಮ ಸಂಬಂಧ ಇಟ್ಟುಕೊಳ್ಳುವರೋ ಅವರ ಉದ್ದೇಶಗಳು ಎಷ್ಟೋ "ಒಳ್ಳೆಯವು" ಎಂದು ತೋರಿಸದಿರೂ ದೇವರು ಅವರ ಜೊತೆ ಎಂದಿಗೂ ಸಂತೋಷಿಸಲಾರನು.[11] ಯಾವಾಗ ನಾವು ಕೆಟ್ಟತನದ ಜೊತೆ ರಾಜಿಮಾಡಿಕೊಳ್ಳಲು ಪ್ರಾರಂಭಿಸುತ್ತೇವೆಯೋ, ಆಗ ನಾವು ನಾಶನದೆಡೆಗೆ ಹೋಗುತ್ತೇವೆ. ಯೆಹೋಫಾಫಾಟನು ಸಮಾಧಾನದೊಂದಿಗೆ ಕೈ ಜೋಡಿಸಲು ಆರಂಭಿಸಿದನು; ಈಗ ಆತನು ತನ್ನ ಜೀವಿತವನ್ನು ಯುದ್ಧದಲ್ಲಿ ಇಟ್ಟನು.

### "ಅವರಿಗೆ – ಏನೂ – ಕೇಳಬೇಕೆನ್ನುತ್ತಾರೋ – ಅದನ್ನು – ಅವರಿಗೆ – ಹೇಳು" ಎಂಬ ಆಟ

ಸುಳ್ಳು ಪ್ರವಾದಿಗಳು "ಅವರಿಗೆ - ಏನು - ಕೇಳಬೇಕೆನ್ನುತ್ತಾರೋ - ಅದನ್ನು - ಅವರಿಗೆ - ಹೇಳು" ಎಂಬ ಆಟವನ್ನು ಆಡಿದರು. ಯೆಹೋಷಾಫಾಟನು ಇಸ್ರಾಯೇಲ್ಯರ ಅರಸನಿಗೆ, "ಯೆಹೋವನ ಸನ್ನಿಧಿಯಲ್ಲಿ ವಿಚಾರಿಸು" ಎಂದು ಹೇಳಿದನು (ವಚನ 5). ಯಾವುದೇ ಸಮಯದಲ್ಲಿ ನಾವು ಗಭೀರವಾದ ನಿರ್ಧಾರವನ್ನು ತೆಗೆದುಕೊಳ್ಳುವಾಗ, ನಾವು ಮೊದಲು ಕರ್ತನೆಡೆ[12] ಹೋಗಬೇಕು ಮತ್ತು ಆತನ ಉತ್ತರವನ್ನು ಅಂಗೀಕರಿಸುವುದಕ್ಕೆ ಒಪ್ಪುವವರಾಗಿರಬೇಕು.

"ಆಗ ಇಸ್ರಾಯೇಲ್ಯರ ಅರಸನು ತನ್ನ ರಾಜ್ಯದಲ್ಲಿದ್ದ ಸುಮಾರು ನಾನೂರು ಮಂದಿ ಪ್ರವಾದಿಗಳನ್ನು ಕೂಡಿಸಿದನು" (ವಚನ 6ಎ). ಈ ನಾನೂರು ಮಂದಿ ಪ್ರವಾದಿಗಳು ಯೆಹೋವನ ಪ್ರವಾದಿಗಳು ಎಂದು ಕರೆಯಲ್ಪಡುತ್ತಿರಲಿಲ್ಲ, ಒಂದು ಸಂಗತಿಯೆಂದರೆ ಅವರು ಯೆಹೋವನ ಹೆಸರಿನಲ್ಲಿ ಮೊರೆಯಿಡುತ್ತಿದ್ದರು (ವಚನಗಳು 11, 12, 24), ಆದರೆ ನಿಜವಾದ ಪ್ರವಾದಿಗಳು ತಮ್ಮನ್ನು ಯೆಹೋವನ ಪ್ರವಾದಿಗಳು ಎನ್ನುವುದರ ಬದಲಾಗಿ ಆಹಾಬನ ಪ್ರವಾದಿಗಳು ಎಂದು ಸೂಚಿಸಿಕೊಳ್ಳುತ್ತಿದ್ದರು (ವಚನಗಳು 22, 23). ಅವರು ಯಾರು ಎಂಬುದು ನಮಗೆ ಖಚಿತವಾಗಿ ತಿಳಿದಿಲ್ಲ. ಬಹುಶಃ ಆಹಾಬನು ಎಲೀಯನು ಕೊಂದಂತಹ 450 ಬಾಳನ ಪ್ರವಾದಿಗಳ ಬದಲಾಗಿ ಇವರನ್ನು ತಂದಿರಬಹುದು. ಬಹುಶಃ ಇವರು ಕೊಲ್ಲಲಾರದೆ ಉಳಿದ ಆಶೇರು ದೇವತೆಯ ನಾನೂರು ಜನ ಪ್ರವಾದಿಗಳೂ ಆಗಿರಬಹುದು.[13] ಒಂದಂತೂ ನಿಶ್ಚಿತವಾದದ್ದು: ಇವರು ಆಹಾಬನು ಕೇಳಲು ಬಯಸಿದ್ದನ್ನು ಹೇಳುವಂತಹ ಅರಮನೆಯ ಪ್ರವಾದಿಗಳು ಆಗಿದ್ದರು.

ಆಹಾಬನು ಅವರಿಗೆ, "ನಾನು ರಾಮೋತ್ ಗಿಲ್ಯಾದಿನ ವಿರುದ್ಧ ಯುದ್ಧಕ್ಕೆ ಹೋಗ

ಬಹುದೋ?" ಎಂದು ಕೇಳಿದನು. ಆಗ ಅವರು "ಹೋಗಬಹುದು, ಕರ್ತನು ಅದನ್ನು ಅರಸನ ಕೈಗೆ ಒಪ್ಪಿಸುವನು" (ವಚನ 6ಬಿ) ಎಂದು ಉತ್ತರಿಸಿದರು. ಅವರು ನಿಜವಾದ ಪ್ರವಾದಿಗಳು ಕಾಳಜೀಪೂರಕವಾಗಿ ಮಾಡುವಂತೆ ಹೇಳುವಂತೆ[14] "ಯೆಹೋವನ ಹೆಸರಿನಲ್ಲಿ" ಎಂಬುದಾಗಿ ಹೇಳಲಿಲ್ಲ. ಈ ವಚನದಲ್ಲಿನ "ಕರ್ತನು" ಎಂಬ ಪದವು ಇಬ್ರಿಯ ಭಾಷೆಯಲ್ಲಿ *ಅಡೋನೈ*, ಇದು ಬಾಳನನ್ನು ಸೂಚಿಸಲು ಸಹ ಬಳಿಕೆಯಾಗುತ್ತಿತ್ತು.[15]

ವಾಸ್ತವವಾಗಿ, ನೂರೂರು ಜನ ಪ್ರವಾದಿಗಳು ಕೊಡಲ್ಪಟ್ಟ ಸಮಸ್ತ ಉತ್ತರವು ಅಸ್ಪಷ್ಟ ವಾ ಗಿತ್ತು. "ಹೋಗಬಹುದು" ಎಂಬುದಾಗಿ ಅವರು ಮುಂದೆ "ಕರ್ತನು ಅದನ್ನು ಅರಸನ ಕೈಗೆ ಒಪ್ಪಿಸುವನು" ಎಂದು ಹೇಳಿದರು. ಯಾವ ಕರ್ತನು? ಯೆಹೋವನೇ ಅಥವಾ ಬಾಳನೇ ಯಾವ ಅರಸನು? ಇಸ್ರಾಯೇಲಿನ ಅರಸನೋ ಅಥವಾ ಸಿರಿಯಾದ ಅರಸನೋ? "ಅದನ್ನು" ಎಂದರೆ ಯವುದನ್ನು? ಇದರ ಅರ್ಥವೇನು? ಇದು ಬೇಕಾದ ಅರ್ಥವನ್ನು ಕೊಡಬಹುದು,[16] ಆಹಾಬನೂ ಕೂಡಾ ಬೆನ್ಹದದನ ಕೈಗೆ ಒಪ್ಪಿಸಿಕೊಟ್ಟಂತೆ ಕೊಡಲಿಲ್ಲವೋ. (ಈ ಪ್ರವಾದಿಗಳ ಸಂದೇಶವು ಸಣ್ಣ ವೃತ್ತ ಪತ್ರಿಕೆಗಳಲ್ಲಿರುವ "ಅತೀಂದ್ರೀಯ ಶಕ್ತಿಯ" "ಪ್ರಕಟಣೆಗಳಂತಿರುವ" ಅಂಶಗಳಿಗೆ ಹೋಲಿಕೆಯಾಗಿದೆ; ಇಂಥ ಅಸ್ಪಷ್ಟವಾದ ಮುಂತಿಳಿಸುವಿಕೆಗಳು ಹೆಚ್ಚಾಗಿ ಎಲ್ಲ ತರದ ಅರ್ಥವನ್ನು ಕೊಡುವವುಗಳಾಗಿರುತ್ತವೆ.)

ಯೆಹೋಷಾಫಾಟನು ಅವರ ಅಸ್ಪಷ್ಟವಾದ ಉತ್ತರದಿಂದ ಅಸಂತುಷ್ಟನಾಗಿದ್ದರ ಬಗೆಗೆ ನಾವು ಆಶ್ಚರ್ಯಪಡಬೇಕಾಗಿಲ್ಲ. "ಆದರೆ ಯೆಹೋಷಾಫಾಟನು ಇಸ್ರಾಯೇಲರ ಅರಸನನ್ನು ಯೆಹೋವನ ಪ್ರವಾದಿಗಳಲ್ಲಿ ಇವರ ಹೊರತಾಗಿ ನಾವು ವಿಚಾರಿಸಬಹುದಾದ ಇತರ ಪ್ರವಾದಿ ಗಳು ಇರುವುದಿಲ್ಲವೋ?" (ವಚನ 7) ಎಂದು ಕೇಳಿದನು. ಯೆಹೋಷಾಫಾಟನು "ನಾವು ನಿಜವಾದ ದೇವರ ಪ್ರವಾದಿಗೆ ಏನು ಸಂಭವಿಸಬಹುದು ಎಂಬುದನ್ನು ಕೇಳಬೇಕು" ಎಂದು ಹೇಳಿದನು.

**"ನನಗೆ – ಒಪ್ಪಿಗೆಯಾಗುವವರೆಗೆ – ಇರುವ – ಆ ಸತ್ಯವು – ಬೇಕು" ಎಂಬ ಆಟ**

ಅಧಾರ್ಮಿಕನಾದ ಅರಸನು "ನನಗೆ - ಒಪ್ಪಿಗೆಯಾಗುವವರೆಗೆ - ಇರುವ ಆ ಸತ್ಯವು - ಬೇಕು" ಎಂಬ ಆಟವನ್ನು ಆಡಿದನು. ನಮಗೋಸ್ಕರ ಯೆಹೋವನ ಸನ್ನಿಧಿಯಲ್ಲಿ ವಿಚಾರಿಸಬಲ್ಲವನಾದ ಇನ್ನೊಬ್ಬ ಪ್ರವಾದಿಯಿರುತ್ತಾನೆ: "ಅವನು ಇಮ್ಲನ ಮಗನಾದ ಮಿಕಾಯೆಹು ಎಂಬವನು ಎಂದು ಆಹಾಬನು ಯೆಹೋಷಾಫಾಟನಿಗೆ ಉತ್ತರಿಸುವಿಕೆಯಲ್ಲಿ ತನ್ನ ಸ್ವಭಾವವನ್ನು ಹೆಚ್ಚಾಗಿ ಪ್ರಕಟಿಸಿದನು" (ವಚನ 8ಎ).

ಈ ಪರಿಚ್ಛೇದವು ನಮಗೆ ಅನೇಕ ಸಂಗತಿಗಳನ್ನು ತಿಳಿಸುತ್ತದೆ:

ಮೊದಲು, ಇನ್ನೊಬ್ಬ ಪ್ರವಾದಿಯಾದ ಮಿಕಾಯೆಹುವು,[17] ಅನೇಕ ಸಂದರ್ಭಗ ಳಲ್ಲಿ ಆಹಾಬನನ್ನು ಎದುರಿಸಿದ್ದನು.[18] "ಮಿಕಾಯೇಹು" ಇದರ ಅರ್ಥವು "ಯೆಹೋವನ ಹಾಗೆ ಇರುವವನು" ಎಂಬುದಾಗಿದೆ. ಬಹುಶಃ ಕರ್ಮೆಲ್ ಬೆಟ್ಟದ ಮೇಲೆ ಎಲೀಯನಿಂದ ಧೈರ್ಯಗೊಂಡು ಕ್ರಿಯಾಶೀಲನಾದ ಇನ್ನೊಬ್ಬ ಪ್ರವಾದಿ ಈತನಾಗಿರಬಹುದು. ಯೆಹೂದಿ ಸಂಪ್ರದಾಯದ ಪ್ರಕಾರ, ಆತನು 1 ಅರಸು 20ರಲ್ಲಿ ಆಹಾಬನಿಗೆ ಎಲೀಯನು ಸವಾ ಲೆಸಗುವಾಗ ವೇಷಮರೆಸಿಕೊಂಡು ಬಂದ ಪ್ರವಾದಿಯಾಗಿದ್ದನು ಎಂದನು.

ಎರಡನೆಯದು, ಸತ್ಯವು ಯಾವಾಗಲೂ ಅಹಲ್ಲಾದಕರವಾಗಿರುವದಿಲ್ಲ. ಆಹಾಬನು "ಸತ್ಯವು" ಯಾವಾಗಲೂ ಆತನಿಗೆ "ಒಳ್ಳೆಯ ಸುದ್ದಿ" ಆಗಿರಬೇಕು ಎಂದು ಬಯಸುವವನಾಗಿದ್ದನು. ಸತ್ಯವು ಯವಾಗಲೂ "ಒಳ್ಳೆಯದು" ಆಗಿರುವುದಿಲ್ಲ; ಕೆಲಸಾರಿ ಇದು "ಕೆಟ್ಟದ್ದೂ" ಆಗಿರುತ್ತದೆ. ಹಳೆಯ ಒಂದು ಹೇಳಿಕೆಯ ಪ್ರಕಾರ "ಸತ್ಯವು ನೋವ ನ್ನುಂಟುಮಾಡುತ್ತದೆ." ಆದಾಗ್ಯೂ ಸತ್ಯವು ಕೆಲಸಾರಿ ಗುಣಪಡಿಸುವುದಾಗಿರುತ್ತದೆ, ಹೇಳಿಕೆಯು ಸರಿಯಾದುದಾಗಿದ್ದು ಕೆಲಸಾರಿ ಅದನ್ನು ನಾವು ಕೇಳಿದಾಗ ನಾವು ನಮ್ಮ

ತಲೆಯನ್ನು ತೂಗುವುದೇ ಸಾಕೆನ್ನಿಸುತ್ತದೆ.

ನಾನು ಅಬೆಲಿಯನ್ ಕ್ರಿಶ್ಚಿಯನ್ ಯುನಿವರ್ಸಿಟಿಯಲ್ಲಿ ಡಾ. ಫೆರಡ್. ಬರ್ಟನ್ ಅವರ ಅಡಿಯಲ್ಲಿ ಧರ್ಮೋಪದೇಶದ ಮೇಲೆ ತರಬೇತಿಯನ್ನು ತೆಗೆದುಕೊಂಡೆನು. ಮೊದಲ ಸೆಮಸ್ಟರದಲ್ಲಿ ಪ್ರಸಂಗಗಳನ್ನು ಸಿದ್ಧಪಡಿಸುವುದಾಗಿತ್ತು; ಅದರಲ್ಲಿ ನಾನು "ಎ" ಗ್ರೇಡನ್ನು ಪಡೆದನು. ನಂತರದ ಸೆಮಸ್ಟರದಲ್ಲಿ ಮಂಡನೆಯು ಇತ್ತು. ನಾನೂ ನನ್ನ ಜೀವಿತದುದ್ದಕ್ಕೂ ಭಾಷಣೆ ಸ್ಪರ್ದೆಯಲ್ಲಿ ಗೆಲ್ಲುತ್ತಾ ಬಂದದ್ದರಿಂದ ಮತ್ತು ಅನೇಕ ವರ್ಷಗಳಿಂದ ಪ್ರಸಂಗವನ್ನು ಮಡುತ್ತಾ ಬಂದದ್ದರಿಂದ, ನನಗೆ ಒಳ್ಳೆಯ ಅಂಕಗಳೇ ಬರಬಹುದು ಎಂದು ನಾನು ಯೋಚಿಸಿದ್ದೆನು; ಅಂತೆಯೇ ನಾನು ಈ ಕೋರ್ಸಿನಲ್ಲಿ ನಾನು "ಎ" ಗ್ರೇಡನ್ನು ಬಯಸುವವನಾಗಿದ್ದೆನು. ನನ್ನ ಈ ಮೊದಲಿನ ಶ್ರಮಕ್ಕೆ ನಾನು "ಸಿ" ಗ್ರೇಡನ್ನು ಪಡೆದಾಗ ನಾನು ಎಷ್ಟು ಕೋಪಗೊಂಡಿದ್ದೆನು ಎಂಬುದನ್ನು ನಾನು ಇನ್ನೂ ನೆನಪಿಸಿಕೊಳ್ಳು ತ್ತೇನೆ. ಕೊನೆಯಲ್ಲಿ, ಸತ್ಯವನ್ನು ಹೇಳುತ್ತಾ ಇರವದು ನನಗೆ ಒಳ್ಳೆಯದನ್ನು ಮಾಡಿತು. ಕ್ರಮೇಣವಾಗಿ ಮಾತನಾಡುವಾಗ ನಾನು ಬಳಸುವ ಕೆಲ ಕೆಟ್ಟ ಅಭ್ಯಾಸಗಳಿಂದ ನಾನು ಬಿಡುಗಡೆ ಮಾಡಿಕೊಂಡೆನು. ಹೀಗೆ ಆ ಸಮಯದಲ್ಲಿ, ನನಗೆ ಅವುಗಳು ಮೆಚ್ಚಿಕೆಯಾಗುತ್ತಿರಲ್ಲ!

ನಾವು ನಮಗೆ ಸತ್ಯವು ಬೇಕು ಎಂದು ಹೇಳುತ್ತೇವೆ, ಆದರೆ ನಮಗೆ ಅದು ನಿಜವಾಗಿಯೂ ಬೇಕೋ? ನಾವು ವೈದ್ಯರ ಹತ್ತಿರ ಹೋದಾಗ, ನಮಗೆ ನಮ್ಮ ಆರೋಗ್ಯದ ಬಗೆಗೆ ಸತ್ಯವನ್ನು ಕೇಳಬೇಕೆನ್ನುತ್ತಿವೋ ಅಥವಾ "ಎಲ್ಲವೂ ಸರಿಯಾಗಿದೆ"[19] ಎಂದು ಕೇಳಬಯಸುತ್ತಿವೋ? ನಾವು ಅಳತೆಪಟ್ಟಿಯ ಮೇಲೆ ನಿಂತಾಗ, ನಾವು ನಿಜವನ್ನು ಬಯಸುತ್ತೇವೆಯೋ, ಅಥವಾ "ನಿಮ್ಮ ತೂಕ ಸರಿಯಾಗಿದೆ" ಎಂದು ಪಟ್ಟಿಯು ಸೂಚಿಸುವದನ್ನು ನೀನು ಬಯಸುತ್ತಿಯೋ?

ಮೂರನೆಯದಾಗಿ, ಇದಂತೂ ನಿಶ್ಚಿತವಾದುದಾಗಿದೆ *ಆಹಾಬನಿಗೆ* ನಿಜವು ಬೇಕಿರಲಿಲ್ಲ. ಬದಲಾಗಿ ಆತನು ತನಗೇನು ಬೇಕೋ ಅದನ್ನೇ ಕೇಳಬಯಸಿದನು. ಪೌಲನು ಈ ಭಾವನೆಯ ಬಗೆಗೆ ಮಾತನಾಡುತ್ತಾನೆ:

> ಯಾಕಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟು ಕೊಳ್ಳುವರು. ಅವರು ಸತ್ಯಬೋಧನೆಗೆ ಕಿವಿಗೊಡದೆ ಕಲ್ಪನಾ ಕಥೆಗಳನ್ನು ಕೇಳುವುದಕ್ಕೆ ಹೋಗುವರು (2 ತಿಮೊಥೆ 4:3, 4).

ಯೆಹೋಷಾಫಾಟನು ಆಹಾಬನನ್ನು "ಅರಸನು ಹಾಗನ್ನದಿರಲಿ" (ವಚನ 8ಬಿ). ಎಂದು ಹಿಯಾಳಿಸುತ್ತಾನೆ. ಆತನು ಹೀಗೆ ಹೇಳಿದು "ಯೆಹೋವನ ಪ್ರವಾದಿಯ ಬಗೆಗೆ ಅದನ್ನು ಹೇಳಬೇಡ. ಆತನನ್ನು ಕರೆಯುವದನ್ನು ನಿರಾಕರಿಸಬೇಡ, ಕರ್ತನ ವಾಕ್ಯಗಳು ಏನು ಎಂಬುದನ್ನು ನಾನೂ ಸಹ ತಿಳಿಯಬೇಕು."

"ಆಗ ಇಸ್ರಾಯೇಲ್ಯರ ಅರಸನು ಒಬ್ಬ ಕಂಚುಕಿಯನ್ನು ಕರೆದು ಅವನಿಗೆ - ಬೇಗ ಹೋಗಿ ಇಮ್ಲನ ಮಗನಾದ ಮಿಕಾಯೇಹುವನ್ನು ಕರೆದುಕೊಂಡು ಬಾ ಎಂದು ಆಜ್ಞಾಪಿಸಿದನು" (ವಚನ 9). ಈ ವಚನ ಹಾಗೂ ವಚನ 26, ಹಿಂದೆ ಮಿಕಾಯೆಹುವು ಆಹಾಬನಿಗೆ "ಕೆಟ್ಟದ್ದನ್ನು ಮಾತನಾಡಿದ್ದಕ್ಕೆ" (ಉದಾಹರಣೆಗೆ ಸತ್ಯ) ಸೆರೆಯವಾಸದಲ್ಲಿ ಇಡಲ್ಪಟ್ಟಿದ್ದನು ಎಂಬುದನ್ನು ಸೂಚಿಸುವುದಾಗಿದೆ. ಹೀಗೆ ಆಹಾಬನು ಕಂಚುಕಿಗೆ "ಬೇಗನೇ" ಮಿಕಾಯೆಹುವನ್ನು ಹುಡುಕಿಕೊಂಡು ಮತ್ತು ಕರೆತರಲು ತಿಳಿಸಿದನು.

ಕಂಚುಕಿಯು ಮಿಕಾಯೆಹುವನ್ನು ಕರೆತರಲು ಹೋದಾಗ, ಅಲ್ಲಿನ ದೃಷ್ಯವು ಬದಲಾಯಿತು. "ಈಗ ಇಸ್ರಾಯೇಲ್ಯರ ಅರಸನೂ (ಆಹಾಬನು) ಯೆಹೂದ್ಯರ ಅರಸನಾದ ಯೆಹೋಷಾಫಾಟನೂ ರಾಜವಸ್ತ್ರಗಳನ್ನು ಧರಿಸಿಕೊಂಡು ಸಮಾರ್ಯ ಪಟ್ಟಣದ ಹೆಬ್ಬಾಗಿಲಿನ

ಹತ್ತಿರವಿರುವ ಬೈಬಲಿನಲ್ಲಿ[20] ತಮ್ಮ ತಮ್ಮ ಆಸನಗಳ ಮೇಲೆ ಕೂತುಕೊಂಡಿದ್ದರು" (ವಚನ 10ಎ). ಪಟ್ಟಣದ ಬಾಗಿಲುಗಳು ಒಂದು ಮುಖ್ಯವಾದ ಸಾರ್ವಜನಿಕವಾದ ವ್ಯವಹಾರವು ನಡೆಯುವದಿದೆ ಎಂಬುದನ್ನು ಗುರುತಿಸುವಂತದ್ದಾಗಿದೆ. ಇಬ್ಬರು ಅರಸರೂ ತಮ್ಮ ಸಾಗಣಿಕೆಗೆ ಯೋಗ್ಯವಾದ ಸಿಂಹಾನದ ಮೇಲೆ, ತಮ್ಮ ರಾಜಕೀಯ ಪೋಷಾಕುಗಳನ್ನು ಧರಿಸಿಕೊಂಡು ಕೂತುಕೊಂಡರು.

> ಎಲ್ಲಾ ಪ್ರವಾದಿಗಳು ಅವರ ಮುಂದೆ ಪರವಶರಾಗಿ ಮಾತಾನಾಡುತ್ತಾ ಇದ್ದರು ... ಮತ್ತು ಉಳಿದ ಪ್ರವಾದಿಗಳು ಇದೇ ತರದ ಮಾತುಗಳನ್ನು ನುಡಿದು, "ರಾಮೋತ್ ಗಿಲ್ಯಾದಿಗೆ ಹೋಗು; ನೀನು ಕೃತಾರ್ಥನಾಗಿ ಬರುವಿ; ಯೆಹೋವನು ಅದನ್ನು ಅರಸನ ಕೈಗೆ ಒಪ್ಪಿಸುವನು" ಅಂದರು (ವಚನಗಳು 10ಬಿ, 12).

ಪ್ರವಾದಿಗಳಲ್ಲಿ ಒಬ್ಬನಾದ, ಚಿದ್ಕೀಯನು,[21] *ನನ್ನ ಪುಸ್ತಕವಾದ ನಿಮ್ಮ ಪಾಠಗಳಿಗೆ ದಾರ್ಶನಿಕವಾದ ಒತ್ತನ್ನು ಕೊಡಿರಿ* ಎಂಬುದನ್ನು ಸ್ಪಷ್ಟವಾಗಿ ಓದಿರಬಹುದು. ಆತನು ಕಬ್ಬಿಣದ ಲೋಹದ ತುಂಡನ್ನು ಕೊಂಬಿನಂತೆ ಮಾಡಿಸಿ ತಲೆಗೆ ಇಟ್ಟುಕೊಂಡಿದ್ದನು ಮತ್ತು "ಕರ್ತನು ಹೀಗೆ ಹೇಳುತ್ತಾನೆ, ಕೊಂಬುಗಳಿಂದಲೋ ಎಂಬಂತೆ ನೀನು ಆರಾಮ್ಯರನ್ನು ಇರಿದು ಕೊಂದುಹಾಕುವಿ"[22] ಎಂದು ಇತರೆ ಪ್ರವಾದಿಗಳನ್ನು ತಿವಿಯಲು ಸುತ್ತಲೂ ಓಡುತಿದ್ದನು (ವಚನ 11).

ವಚನ 11 ಮತ್ತು 12 ಎರಡರಲ್ಲಿ; ಕರ್ತನು ಎಂಬ ಪದವು ಇಂಗ್ಲೀಷ್‌ನಲ್ಲಿ ಎಲ್ಲವೂ ದೊಡ್ಡ ಅಕ್ಷರದಲ್ಲಿದೆ; ಈಗ ಪ್ರವಾದಿಗಳು ಯೆಹೋವನ ಹೆಸರಿನಲ್ಲಿ ಒಬ್ಬನ್ನೊಬ್ಬರು ತಿವಿಯುತ್ತಿದ್ದಾರೆ. ಈ ಪ್ರವಾದಿಗಳು ಆಹಾಬ ಮತ್ತು ಯೆಹೋಷಾಫಾಟನು ಯಾವ ರೀತಿ ಯಲ್ಲಿ ಬಯಸುತ್ತಾರೋ ಆ ರೀತಿಯಲ್ಲಿ ಬೋಧಿಸುವವರಾಗಿದ್ದರು. ಅವರಿಗೆ ಅದರಲ್ಲಿ ಈಗಾಗಲೇ ಆರಾಧಿಸಿರುವ ಒಂದು ಅಥವಾ ಎರಡರಿಂದ ನೂರಾರು ದೇವರುಗಳನ್ನು ಸೇರಿ ಸುವಲ್ಲಿ ಯಾವ ತೊಂದರೆಯೂ ಆಗುತ್ತಿರಲಿಲ್ಲ. ಒಂದು ವೇಳೆ ಅರಸನು ಇಬ್ರಿಯ ದೇವರಾದ "ಯೆಹೋವನು" ಏನು ಹೇಳುತ್ತಾನೆ ಎಂಬುದನ್ನು ಕೇಳಲು ಬಯಸಿದ್ದಾದರೆ, ಅವರು ಅದನ್ನು ಸಂತೋಷದಿಂದ ಒಪ್ಪುವವರಾಗಿದ್ದರು.

**"ನಿನಗೆ – ಯಾವದು – ಸರಿ – ಎನ್ನಿಸುತ್ತದೆಯೋ – ಅದನ್ನು ನನಗೆ – ಹೇಳು" ಎಂಬ ಆಟ**

ವಿನಮ್ರವಾಗಿ ಮಾತನಾಡುವ ಅಧಿಕಾರಿಯು ನಿನಗೆ - ಯಾವದು - ಸರಿ - ಎನ್ನಿಸುತ್ತದೆಯೋ - ಅದನ್ನು - ನನಗೆ - ಹೇಳು ಎಂಬ ಆಟವನ್ನು ಆಡಿದನು. "ಮಿಕಾಯೆಹುವನ್ನು ಕರೆಯಲು ಹೋದ ದೂತನು ಅವನಿಗೆ ಎಲ್ಲಾ ಪ್ರವಾದಿಗಳು ಏಕಮನಸ್ಸಿನಿಂದ ಶುಭವನ್ನೇ ಮುಂತಿಳಿಸುತ್ತಿರುತ್ತಾರೆ" (ವಚನ 13ಎ). "ಏಕಮನಸ್ಸಿನಿಂದ ಶುಭವನ್ನು" ಇದರ ಅರ್ಥ "ಪ್ರತಿಯೊಬ್ಬರೂ ಇದನ್ನು ಒಪ್ಪಿಕೊಳ್ಳುವವರಾಗಿರುತ್ತಾರೆ" ಎಂದನು. ದೇವರ ಮಾರ್ಗವನ್ನು ವಿರೋಧಿಸುವ "ಏಕಮನಸ್ಸನ್ನು" ಹೊಂದಿದ ಜನಸಮೂಹವು ಇರುವಾಗ ಅದರ ಎದುರು ಎದ್ದು ನಿಂತುಕೊಳ್ಳುವದು, ದೇವರೊಡನೆ ಒಂಟಿಧ್ವನಿಯಿಂದ ಮಾತನಾಡುವದು ಕಠಿಣಮಯವಾದುದು ಆಗಿದೆ.

ದೂತನು "ನಮ್ಮಲ್ಲಿ ಏಕಮನಸ್ಸು ಮತ್ತು ಹೊಂದಾಣಿಕೆಯು ಇದೆ" ಎಂದು ಹೇಳಿ ದನು. "ದೋಣಿಯನ್ನು ಅಲಗಾಡಿಸಬೇಡ." "ದಯವಿಟ್ಟು ನೀನೂ ಅವರಂತೆ ಶುಭವನ್ನೇ ಮುಂತಿಳಿಸು ಎಂದು ಹೇಳಿದನು" (ವಚನ 13ಎ). "ನೀನು ಮನಸ್ಸು ಮಾಡಿದ್ದಾದರೆ ನಮಗೆಲ್ಲಾ ಒಳ್ಳೆಯದಾಗುವದು. ಅರಸನೂ ಸಂತುಷ್ಟನಾಗುವನು, ಉಪಯುಕ್ತತೆಯೆಡೆಗೆ ನಾನು ನೋಡಿ ದರೆ, ನೀನು ಸೆರೆಯಿಂದ ಬಿಡುಗಡೆಯಾಗುವಿ, ಬದಲಾವಣೆಗಾಗಿ ದಯವಿಟ್ಟು ಬೇರೆಯದನ್ನು ಹೇಳು!" ಎಂದು ಆತನು ಹೇಳಿದನು. "ಸಾಕ್ಷಾತ್ಕರಿಗಳಿಗೆ, ನಮಗಾಗಿ ನ್ಯಾಯವಾದವುಗಳನ್ನು

ಸಾಕ್ಷತ್ಕರಿಸಬೇಡಿರಿ (ಬದಲಾಗಿ) ನಯವಾದವುಗಳನ್ನು ನುಡಿಯಿರಿ. ಮಾಯವಾದವುಗಳನ್ನೇ ಸಾಕ್ಷತ್ಕರಿಸಿರಿ (ಅಕ್ಷರ ಸಹ ಮೃದುವಾದ ಸಂಗತಿಗಳನ್ನು)" (ಯೆಶಾಯ 30:10) ಎಂದು ಪ್ರವಾದಿಗೆ ಹೇಳಿದಂತವನ ಬಗೆಗೆ ಯೆಶಾಯನು ಬರೆದಂತೆ ಈ ದೂತನು ಇದ್ದಾನೆ.

ಈ ಧೈರ್ಯವಂತ ಪ್ರವಾದಿಯು ಕೊನೆಯಲ್ಲಿ ಹೇಳಿದನು, "ಎಲ್ಲವನ್ನೂ ಮರೆತುಬಿಟ್ಟು, ನಿನಗೇನು ಬೇಕೋ ಅದನ್ನು ಹೇಳು" ಅಂದು. ಅಂತಿಮವಾಗಿ ನಾವು ನಮ್ಮ ನಾಯಕನನ್ನು ಭೇಟಿಯಾಗುತ್ತೇವೆ: "ಆದರೆ ಮಿಕಾಯೆಹುವು (ದೂತನಿಗೆ) 'ಯೆಹೋವನು ಹೇಳುವುದನ್ನೇ ನುಡಿಯುತ್ತೇನೆ' ಎಂದು ಉತ್ತರಿಸಿದನು" (ವಚನ 14). ಬೋಧಿಸುವಂತಹ ಮತ್ತು ತಿಳಿಸುವಂತಹ ನಮ್ಮಲ್ಲಿ ಎಲ್ಲರಿಗೂ ಈ ಪದಗಳಿಂದ ನಮ್ಮ ಹೃದಯದಲ್ಲಿ ಅಚ್ಚೊತ್ತುಕೊಳ್ಳುವಂತೆ ಇರಿಸಿಕೊಳ್ಳುವದು ಅವಶ್ಯವಿದೆ!

ಮಿಕಾಯೆಹುವು ಆಹಾಬನಲ್ಲಿಗೆ ತಲುಪಿದಾಗ, ಆಡುತ್ತಿದ್ದ ಆಟವು ಮುಂದುವರೆಯಿತು. "ಅವನು ಅರಸನ ಬಳಿಗೆ ಬಂದಾಗ ಅರಸನು ಮಿಕಾಯೆಹುವೇ, ನಾವು ರಾಮೋತ್ ಗಿಲ್ಯಾದಿನ ಮೇಲೆ ಯುದ್ಧಕ್ಕಾಗಿ ಹೋಗಬಹುದೋ ಬಾರದೋ ಎಂದು ಕೇಳಿದನು" (ವಚನ 15ಎ). ಆಹಾಬನಿಗೆ ಮಿಕಾಯೆಹುವು ಏನು ಹೇಳುತ್ತಾನೋ ಅದರೆಡೆಗೆ ಲಕ್ಷವಿರಲಿಲ್ಲ; ಆತನು ಯೆಹೋಶಾಫಾಟನ ಪ್ರಯೋಜನಕ್ಕಾಗಿ ಅದನ್ನು ಕೇಳುತ್ತಿದ್ದಾನೆ. ಮಿಕಾಯೆಹುವು ಆತನು (ಅಹಾಬನು) ಯೆಹೋಷಾಫಾಟನ ಪ್ರಯೋಜನಕ್ಕಾಗಿ ಕೇಳುತ್ತಿದ್ದಾನೆ ಎಂಬುದನ್ನು ತಿಳಿದವನಾಗಿದ್ದನು, ಮತ್ತು ಯೆಹೋಷಾಫಾಟನ ಪ್ರಯೋಜನಕ್ಕಾಗಿ ಇದನ್ನು ಕೇಳುತ್ತಿರುವದು ಎಂದು ಮಿಕಾಯೇಹು ತಿಳಿದಿದ್ದಾನೆ ಎಂಬುದು ಆಹಾಬನಿಗೂ ತಿಳಿದಿತ್ತು ಮತ್ತು ಅವರು ಆಟಮಾಡುತ್ತಿದ್ದಾರೆಂದು ಆಹಾಬನೂ ಬಲ್ಲವನಾಗಿದ್ದನು ಮಿಕಾಯೆಹುವೂ ಬಲ್ಲವನಾಗಿದ್ದನು ... ಮಿಕಾಯೆಹುವು ಆಟವನ್ನು ಆಡಿದನು. ಆತನು ಸುಳ್ಳು ಪ್ರವಾದಿಗಳು ಕೊಡುವ ಉತ್ತರವನ್ನು ಕೊಟ್ಟನು. "ಅವನು ಹೋಗಬಹುದು, ಕೃತಾರ್ಥನಾಗಿ ಬರುವಿ; ಯೆಹೋವನು ಪಟ್ಟಣವನ್ನು ಅರಸನ ಕೈಗೆ ಒಪ್ಪಿಸುವನು ಎಂದು ಹೇಳಿದನು" (ವಚನ 15ಬಿ).[23] ಗಮನಿಸಿರಿ ಇಲ್ಲಿ ಮಿಕಾಯೆಹುವು "ಯೆಹೋವನು ಹೇಳಿದಂತೆ" ಎಂದು ಹೇಳಲಿಲ್ಲ.

ಮಿಕಾಯೆಹುವು ತಾನೇನು ಹೇಳಿದನೋ ಆ ಅರ್ಥವನ್ನು ಹೊಂದಿರಲಿಲ್ಲ ಎಂಬುದು ಎಲ್ಲರಿಗೂ ನಿಶ್ಚಿತವಾದದು. ಆ ದೃಷ್ಯದ ಒಂದು ದೃಷ್ಯದ ಮುದ್ರಣ ನನ್ನಲ್ಲಿದ್ದರೆ ಆದರೆ ಎಂದು ನಾನು ಬಯಸುವವನಾಗಿದ್ದೇನೆ ಇದು ಆತನು ಮಾತನಾಡುವಂತಹ ರೀತಿ ಸರಿಯೋ ಅಥವಾ ಆತನ ಮುಖಚರ್ಯೆಯು ಆತನು ಆಟವಾಡುತ್ತಿದ್ದಾನೆ ಎಂಬುದನ್ನು ಪ್ರಕಟಿಸುತ್ತಿದೆಯೋ?[24]

ಆಹಾಬ ಮಿಕಾಯೆಹುವಿಗೆ, "ಸತ್ಯವನ್ನೇ ತಿಳಿಸಬೇಕೆಂದು ಯೆಹೋವನ ಹೆಸರಿನಲ್ಲಿ ನಿನ್ನಿಂದ ಎಷ್ಟು ಸಾರಿ ಪ್ರಮಾಣ[25] ಮಾಡಿಸಬೇಕು" (ವಚನ 16) ಎಂದು ಹೇಳಿದನು. ಎಂಥ ಅದ್ಭುತವಾದ ಭಾವನಾತ್ಮಕತೆಯು ಆ ಮಾತಿನಲ್ಲಿ ಇದೆ! ಓಹ್, ನಮ್ಮ ದಿನಗಳಲ್ಲಿ ಧಾರ್ಮಿಕ ಶಿಕ್ಷಕರು ಮತ್ತು ಬೋಧಕರ ಮಾತಿನ ಪ್ರತಿಯೊಂದು ಕೇಳುವಿಕೆಯಲ್ಲಿಯೂ ವೀಕ್ಷಕರು ಅಳುವಂತೆ ಮಾಡುತ್ತಿತ್ತು. "ಕರ್ತನ ಹೆಸರಿನಲ್ಲಿ ಸತ್ಯವನ್ನು ಬಿಟ್ಟು ಬೇರೇನೂ ಮಾತನಾಡುವುದಿಲ್ಲ ಎಂದು ನಾವು ಪ್ರಮಾಣಮಾಡುತ್ತೇವೆ. ನಮಗೆ ಸತ್ಯವನ್ನು, ಸಂಪೂರ್ಣ ಸತ್ಯವನ್ನು ಮತ್ತು ಸತ್ಯವನ್ನೇ ಕೊಡಿರಿ!" ಇತ್ತೀಚೆಗೆ ಗಮನಿಸಿದಂತೆ, ಈ ಅದ್ಭುತವಾದ ಮಾತುಗಳು ಆಟವನ್ನು ಆಡುತ್ತಿದ್ದ ಮನುಷ್ಯನ ಬಾಯಿಂದ ಇನ್ನೊಬ್ಬರ ಪ್ರಯೋಜನಕ್ಕಾಗಿ ಬರಿ ಪದಗಳನ್ನು ಮಾತಾನಾಡುತ್ತಿದ್ದ ಮನುಷ್ಯನ ಬಾಯಿಂದ ಬಂದವು.

ಆ ವಿಷಯಕ್ಕಾಗಿ ದೇವರ ಪ್ರವಾದಿಯು "ಇನ್ನು ಹೆಚ್ಚಿನ ಆಟಗಳು ಬೇಡ! ಇದು ಇದರಂತೆ ಇದೆ ಎಂಬುದನ್ನು ನಮಗೆ ಹೇಳಿರಿ!" ಎಂದು ಹೇಳಿದನು.

> ಅವನು - "ಇಸ್ರಾಯೆಲ್ಯರೆಲ್ಲರೂ ಕುರುಬನಿಲ್ಲದ ಕುರಿಗಳಂತೆ ಬೆಟ್ಟಗಳಲ್ಲಿ ಚದರಿ ಹೋದದ್ದನ್ನು ಕಂಡೆನು; ಆಗ ಯೆಹೋವನು - ಇವರು ಒಡೆಯನಿಲ್ಲದವರಾಗಿರುತ್ತಾರೆ;

ಸಮಾಧಾನದಿಂದ ತಮ್ಮ ತಮ್ಮ ಮನೆಗಳಿಗೆ ಹೋಗಲಿ" (ವಚನ 17).

ಮಿಕಾಯೆಹುವು ಎಲ್ಲರೂ ಬಳಸುತ್ತಿದ್ದ ಚಿರಪರಿಚಿತವಾದ ವೇದಭಾಗವನ್ನು ಬಳಸಿದನು. ಮೋಶೆಯು ದೇವರ ಜನರು "ಕುರುಬನಿಲದ ಕುರಿಗಳಂತಾಗಿರಬಾರದು" (ಅರಣ್ಯಕಾಂಡ 27:16, 17)[26] ಈ ಪದಪ್ರಯೋಗವನ್ನು ನಾಯಕನಿಗಾಗಿ ಪ್ರಾರ್ಥಿಸುವಾಗ ಬಳಸಿದನು. ಇಸ್ರಾಯೇಲ್ಯರು "ಒಡೆಯನಿಲ್ಲದವರು" ಎಂದು ಚಿತ್ರಿಸಲ್ಪಡುತ್ತಿದ್ದ ಉಪಸ್ಥಿತವಿದ್ದ ಈ ಎಲ್ಲಾ ಪ್ರವಾದನೆಗಳು ಆಹಾಬನ ಮರಣದ ಬಗೆಗೆ ಇವೆ ಎಂಬುದನ್ನು ಇದರಿಂದ ಅರ್ಥ ಮಾಡಿಕೊಳ್ಳಬಹುದು.

## ಒಂದು ವೇಳೆ ನಾವು ಸತ್ಯದೊಡನೆ ಆಟಆಡಿದರೆ, ನಾವು ಕಳೆದುಕೊಳ್ಳುತ್ತೇವೆ[27] (22:18-23)

ಆತನ ಮರಣದ ಬಗೆಗಿನ ಹಿಂದೆ ಹೇಳಲ್ಪಟ್ಟ ಪ್ರವಾದನೆಯು ಆದಂತೆ ಈಗ ಮರಣದ ಪ್ರವಾದನೆಯು ಆಹಾಬನ ತೊಡೆಯ ಮೇಲೆ ಕೂತಿದೆ (1 ಅರಸು 21:27ನ್ನು ನೋಡಿರಿ) ಆದರೆ ಇದು ಆಗಲಿಲ್ಲ. ಮೊದಲಾಗಿ ಅರಸನು ಅವಮಾನಿತನಾದನು. ಮತ್ತು ಆತನು ಮಿಕಾಯೆಹುವಿನ ಮಾತುಗಳನ್ನು ಆತನು ಬಳಸಿ ಮಿಕಾಯೆಹುವು ಎಂದಿಗೂ ತನಗೆ ಶುಭವನ್ನು ನುಡಿಯುವುದಿಲ್ಲ ಎಂದು ತಾನು ಅಂದುಕೊಂಡಿದ್ದು ಸರಿ ಎಂಬುದನ್ನು ಸಾಬೀತುಪಡಿಸಿದನು (ವಚನ 18). ಆಹಾಬನಿಗೆ ಸತ್ಯದಿಂದ ಯಾವ ಲಾಭವು ಇರಲಿಲ್ಲ. ಆತನು ಮಾಡಿದೆಲ್ಲವೂ ಅದರೊಡನೆ ಆಟವಾಡುವುದಕ್ಕೆ ಆಗಿತ್ತು.

ಆಹಾಬನ ಆಪಾದನೆಯನ್ನು ಅನುಸರಿಸಿ, ನಾವು ಬೈಬಲ್ಲಿನಲ್ಲಿರುವ ಒಂದು ಶಕ್ತಿಯುತವಾದ ಒಂದು ಭಾಗವನ್ನು ನೋಡುತ್ತೇವೆ. ಇದು ನಾವೆಂದಿಗೂ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದಂತಹ ಭಾಗಗಳಲ್ಲಿ ಇದೂ ಒಂದಾಗಿದೆ, ಆದರೆ ಮುಖ್ಯ ಸಂಗತಿಯನ್ನು ಅಪಾರ್ಥಮಾಡಿಕೊಳ್ಳುವದೂ ಸಹ ಹೆಚ್ಚಾಗಿ ಅಸಾಧ್ಯವಾದುದ್ದು:

> ಅದಕ್ಕೆ ಮಿಕಾಯೆಹುವು - "ಅದಿರಲಿ, ಯೆಹೋವನ ವಾಕ್ಯವನ್ನು ಕೇಳು. ಯೆಹೋವನು ತನ್ನ ಸಿಂಹಾಸನದ ಮೇಲೆ ಕೂತುಕೊಂಡದ್ದನ್ನೂ ಪರಲೋಕ ಸೈನ್ಯಗಳು (ದೂತರು) ಆತನ ಎಡಬಲಗಡೆಗಳಲ್ಲಿ ನಿಂತಿದ್ದನ್ನೂ ಕಂಡೆನು." ಯೆಹೋವನು ತನ್ನ ಹತ್ತಿರ ನಿಂತವರನ್ನು - "ಆಹಾಬನು ಹತನಾಗಿ ಬೀಳುವಂತೆ ಅವನನ್ನು ರಾಮೋತ್ ಗಿಲ್ಯಾದಿನ ಯುದ್ಧಕ್ಕೆ ಯಾರು ಪ್ರೇರಿಸುವಿರಿ" ಎಂದು ಕೇಳಿದಾಗ ಒಬ್ಬನು ಈ ತರುವಾಗಿಯೂ ಇನ್ನೊಬ್ಬನು ಆ ತರವಾಗಿಯೂ ಉತ್ತರ ಕೊಟ್ಟರು. ಕಡೆಯಲ್ಲಿ ಒಂದು ಆತ್ಮವು ಯೆಹೋವನ ಮುಂದೆ ಬಂದು ನಿಂತು ಆತನಿಗೆ "ನಾನು ಹೋಗಿ ಅವನನ್ನು ಪ್ರೇರೇಪಿಸುವೆನು" ಅಂದನು. "ಹೇಗೆ ಪ್ರೇರಿಸುವೆನು ಎಂದು ಕೇಳಲು ಅದು ನಾನು ಅಸತ್ಯವನ್ನಾಡುವ ಆತ್ಮವಾಗಿ ಅವನ ಎಲ್ಲಾ ಪ್ರವಾದಿಗಳಲ್ಲಿ ಸೇರುವೆನು ಎಂದು ಉತ್ತರ ಕೊಟ್ಟಿತು. ಆಗ ಆತನು ಅದಕ್ಕೆ - ಹೋಗಿ ಅದರಂತೆ ಮಾಡು; ಅವನನ್ನು ಪ್ರೇರಿಸಿ ಸಫಲನಾಗುವಿ ಎಂದನು. ನೋಡು, ಯೆಹೋವನು ನಿನ್ನ ವಿಷಯದಲ್ಲಿ ಕೇಡುನುಡಿದು ನಿನ್ನ ಎಲ್ಲಾ ಪ್ರವಾದಿಗಳಲ್ಲಿ ಅಸತ್ಯವನ್ನಾಡುವ ಆತ್ಮವನ್ನು ಕಳುಹಿಸಿದ್ದಾನೆ" ಎಂದು ಹೇಳಿ ದನು (ವಚನಗಳು 19-23).

ದೇವರಿಗೆ ಯಾರೋಬ್ಬರ ಸಲಹೆಯಾಗಲಿ ಸೂಚನೆಯಾಗಲಿ ಅವಶ್ಯಕತೆಯು ಇಲ್ಲದ್ದರಿಂದ (ರೋಮಾಪುರ 11:34, 35), ನಾವು ಈ ಕಥೆಯ ಪ್ರತಿಯೊಂದು ವಿವರಗಳನ್ನು ಅಕ್ಷರಶಃ ಸಹ ತೆಗೆದುಕೊಳ್ಳುವುದು ನನಗೆ ಸಂಶಯವೆನ್ನಿಸುತ್ತದೆ. ಮುಖ್ಯತಾತ್ಪರ್ಯವು ಅರ್ಥಮಾಡಿಕೊಳ್ಳಲು ಸರಳವಾಗಿದೆ. ಮಿಕಾಯೆಹುವು ನಾನೂರು ಪ್ರವಾದಿಗಳು ಸುಳ್ಳುಗಾರರು ಎಂದು ಹೇಳಿದನು. ಅವರು ಪ್ರಮಾಣಿಕರಾಗಿರಬಹುದು; ಹಾಗೂ ಇಲ್ಲದಿರಬಹುದು; ಆದರೆ

ಅವರು ಸತ್ಯವನ್ನು ಹೇಳುತ್ತಿರಲಿಲ್ಲ. ಆತನು ಆಹಾಬನಿಗೆ, "ಎದ್ದೇಳು, ಕರ್ತನು ಈ ಪ್ರವಾದಿಗಳ ಬಾಯಲ್ಲಿ ಮೋಸದ ಆತ್ಮವನ್ನು ಹಾಕಿದ್ದಾನೆ" ಎಂದು ಹೇಳಿದನು.

"ಕರ್ತನು ಮೋಸದ ಆತ್ಮವನ್ನು ... ಪ್ರವಾದಿಗಳ ಬಾಯಲ್ಲಿ ಹಾಕಿದನು" ಎಂದು ಪರಿಚ್ಛೇದವು ಹೇಳುವುದರ ಬಗೆಗೆ ಕೆಲವರು ಯೋಚಿಸುವವರಾಗಿದ್ದಾರೆ. ಅಂತೆಯೇ ಇದು "ಇದು ಸರಿಯಾದುದಲ್ಲ" ಎಂದು ಅವರು ಹೇಳುತ್ತಾರೆ. "ಕರ್ತನು ಆಹಾಬನನ್ನು ನಾನೂರು ಮಂದಿ ಪ್ರವಾದಿಗಳ ಮೂಲಕ ವಂಚಿಸಿದನು, ನಂತರ ಆಹಾಬನು ಮೋಸ ಗಾರನಾಗಿರುವುದಕ್ಕೆ ದೂಶಿಸಿದನು." ಈ ಭಾಗವು ಬಹುಶಃ ದೇವರು ಅವಿಶ್ವಾಸಿಗಳ ಹೃದಯವನ್ನು ಕಠಿಣಮಾಡುವುದರ ಬಗೆಗೆ ಮಾತನಾಡುವ ಇತರರ ಜೊತೆ ಇಡುವುದು ಅವಶ್ಯವಾಗಿದೆ. ದೇವರು ಕಠಿಣತೆಯು ಕಾಣಿಸಿಕೊಳ್ಳಲು ಅವಕಾಶವನ್ನುಕೊಟ್ಟನು. ಆ ಭಾಗಗಳ ಮೇಲಿನ ಇನ್ನಿತರ ವಾಕ್ಯಗಳೂ ಇದನ್ನು ಸೂಚಿಸುವುದಾಗಿದೆ, ಆದರೆ ಇದು ಸಂಭವಿಸಿದ್ದಕ್ಕೆ ಕಾರಣ ಜನರ ಸ್ವಭಾವಗಳು ಅದರಲ್ಲಿ ಒಳಗೊಂಡಿದ್ದರಿಂದಲೇ. ಅದೂ ಸಹ ಇಲ್ಲಿನ ಒಂದು ಪ್ರಕರಣವಾಗಿದೆ. ಆಹಾಬನು ಸುಳ್ಳುಪ್ರವಾದಿಗಳ ಸಂದೇಶವನ್ನು ಕೇಳಿದನು ಮತ್ತು ವಂಚಿತನಾದನು. ಯೆಹೋಷಾಫಾಟನು ಅದೇ ಸಂದೇಶವನ್ನು ಕೇಳಿದನು ಆದರೆ ಮೋಸಹೊಂದಲಿಲ್ಲ.

ಇಲ್ಲಿ ಬೋಧಿಸಲ್ಪಟ್ಟ ಇದೇ ತರದ ತತ್ವವು ಕೆರಳಿಸುವಂತಹ ಅನೇಕ ವಿಚಾರಗಳನ್ನು ಹೊಂದಿದ ಹೊಸ ಒಡಂಬಡಿಕೆಯಲ್ಲಿ ಈ ತರದ ಒಂದು ಭಾಗವನ್ನು ಹೊಂದಿದೆ. 2 ಥೆಸಲೋನೀಕ 2:10ರಲ್ಲಿ, ಪೌಲನು "ಅವರು *ಸತ್ಯದ ಮೇಲೆ ಪ್ರೀತಿಯನ್ನಿಡದ* ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ" ನಂತರ ಆತನು ಹೀಗೆ ಹೇಳುತ್ತಾನೆ:

> ಅದೇ ಕಾರಣದಿಂದ ದೇವರು ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವುದಕ್ಕೆ ಅವರನ್ನು ಬಿಡುತ್ತಾನೆ. ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ಈ ಪ್ರಕಾರ ನ್ಯಾಯ ತೀರ್ಪಿಗೆ ಒಳಗಾಗುವರು (2 ಥೆಸಲೋನಿಕ 2:11, 12).

ನಾವು "*ದೇವರು* ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿದನು"ಎಂಬ ಭಾಗವನ್ನು ಅರ್ಥೈಸಿಕೊಳ್ಳಲು ನಾವೆಲ್ಲಾ ಕಷ್ಟಪಡುತ್ತಿದ್ದೇವೆ. ಈ ಭಾಗದಲ್ಲಿ ಒಳಗೊಂಡಿರುವುದೆಲ್ಲವನ್ನು ನಾನು ತಿಳಿಯೆನು, ಆದರೆ ದೇವರು ಸ್ಪಷ್ಟನೂ ಮತ್ತು ನೀತಿವಂತನೂ ಎಂಬುದನ್ನು ನಾನು ಬಲ್ಲೆನು. ಒಂದು ವೇಳೆ ನಾವು ಮೋಸ ಹೊಂದಿದ್ದಾದರೆ ಅದು ದೇವರ ತಪ್ಪಲ್ಲ, ಆದರೆ ಅದು ನಮ್ಮ ಸ್ವಂತದ್ದಾಗಿದೆ ಯಾಕೆಂದರೆ ನಾವು ಸತ್ಯವನ್ನು ಪ್ರೀತಿಸುತ್ತಿಲ್ಲ. "ನಾವು ಸತ್ಯವನ್ನು ಪ್ರೀತಿಸುತ್ತೇವೆಯೋ" ಎಂಬುದಕ್ಕಿಂತಲೂ ಯಾವ ಪ್ರಶ್ನೆಯೂ ಮುಖ್ಯವಾದದ್ದಲ್ಲ. ಹೆಚ್. ಡಬ್ಲು. ಶಾರವರು "ಸತ್ಯವು ಪವಿತ್ರತೆಯಂತೆ ಇದ್ದು, ಒದಗಿಸುವಿಕೆಯು ಯಾವಾಗಲೂ ಬೇಡಿಕೆಗಿಂತಲೂ ಅಧಿಕವಾಗಿರುತ್ತದೆ" ಎಂದಿರುತ್ತಾರೆ.[28]

## ನಾವು ಸತ್ಯವನ್ನು ತಿರಸ್ಕರಿಸಬಹುದು (22:24-28)

ಮಿಕಾಯೆಹುವಿನ ಚಿಕ್ಕ ಕಥೆಯ ಅರ್ಥವನ್ನು ತಿಳಿದುಕೊಳ್ಳುವಲ್ಲಿ ಉಪಸ್ಥಿತವಿದ್ದ ಅವರಿಗೆ ಯಾವ ಕಷ್ಟವಾಗಲಿಲ್ಲ. ಸುಳ್ಳು ಪ್ರವಾದಿಯಾದ ಚಿದ್ಕೀಯನು ತನ್ನ ಕಬ್ಬಿಣದ ಕೊಂಬುಗಳನ್ನು ಹಾಕಿಕೊಂಡು ಸುತ್ತಲೂ ಓಡುತ್ತಿದ್ದವನು, ಮಿಕಾಯೆಹುವಿನ ಕೆನ್ನೆಗೆ ಹೊಡೆದನು ಮತ್ತು ಆತನಿಗೆ ಈ ಸವಾಲನ್ನು ಎಸೆದನು: "ಯೆಹೋವನ ಆತ್ಮವು ನನ್ನನ್ನು ಬಿಟ್ಟು ನಿನ್ನೊಂದಿಗೆ ಮಾಡುವುದಕ್ಕೋಸ್ಕರ ಯಾವ ಮಾರ್ಗವಾಗಿ ಬಂದಿತು?" (ವಚನ 24). ಇನ್ನೊಂದು ಮಾತಿನಲ್ಲಿ, "ನಾವು ಯೆಹೋವನ ಆತ್ಮನಿಂದಲೇ ಮಾತನಾಡುತ್ತಿದ್ದೇವೆ, ಹಿಗೀದ್ದಾಗ ನೀನು ಹೇಗೆ ಈ ಸಂದೇಶವು ಯೆಹೋವನಿಂದ ಬಂದದ್ದು ಎಂದು ಪ್ರತಿಪಾದಿಸುವಿ ಮತ್ತು ನಮ್ಮದಕ್ಕೆ ವಿರುದ್ಧವಾದದ್ದನ್ನು ಹೇಗೆ ಹೇಳುವಿ?" ಎಂಬಂತೆ ಹೇಳಿದನು.

ಚಿದ್ಕೀಯನು ತನ್ನ ಕ್ರಿಯೆಗಳ ಮೂಲಕ ಆತನು ಕರ್ತನ ಆತ್ಮವನ್ನು ಹೊಂದಿಲ್ಲವೆಂಬುದನ್ನು ಸಾಧಿಸಿ ತೋರಿಸಿದನು.[29] ಅದಲ್ಲದೇ ಇದು ಒಬ್ಬರಿಗೆ ಕೆನ್ನೆಯ ಮೇಲೆ ಹೊಡೆಯುವದು ಎಲ್ಲರಿಗೂ ಅವಮಾನಮಾಡಿದಂತದ್ದಾಗಿದೆ. ಮಿಕಾಯೆಹು ಆತನಿಗೆ ತಿರುಗಿ ಕೆನ್ನೆಯ ಮೇಲೆ ಹೊಡೆಯಲಿಲ್ಲ ಅಥವಾ ಘರ್ಷಣೆಯ ಸವಾಲನ್ನು ಎಸೆಯಲಿಲ್ಲ. ಅದನ್ನು ಸ್ಪಷ್ಟಪಡಿಸುವುದಕ್ಕೆ ದೇವರ ಪ್ರವಾದಿಯು ತಲೆಯನ್ನು ಅಲುಗಾಡಿಸುತ್ತಾ ಇರುವುದನ್ನು ನಾನು ನೋಡಬಲ್ಲೆ, ನಂತರ ಆತನು ಶಾಂತವಾಗಿ, ಚಿದ್ಕೀಯನಿಗೆ, "ನೀನು ಅಡಗಿಕೊಳ್ಳುವುದಕ್ಕೆ ಒಳಗಿನ ಕೋಣೆಗೆ ಹೋಗುವ ದಿನದಲ್ಲಿ ಅದು ನಿನಗೆ ಗೊತ್ತಾಗುವದು" (ವಚನ 25) ಎಂದು ಉತ್ತರಿಸಿದನು. ಇದು "ಯಾವದು ಯೆಹೋವನ ಆತ್ಮ ಎಂದು ನೀನು ನೋಡುವಾಗ ನೀನು ಅಡಗಿಕೊಳ್ಳುವಿ." ಬಹುಶಃ ನಾನೂರು ಜನ ಪ್ರವಾದಿಗಳು ಆಹಾಬನು ಯುದ್ಧದಲ್ಲಿ ಗೆಲ್ಲುವನು ಎಂಬುದನ್ನು ಸೂಚಿಸಿದ್ದರೂ ಸಹ, ಯುದ್ಧ ಭೂಮಿಯಿಂದ ಆಹಾಬನು ಸತ್ತನು ಎಂಬ ಮಾತು ಕೇಳುವ ಸಮಯವು ಬೇಗನೇ ಕೈಗೆ ಬರುವದು ಎಂಬುದನ್ನು ಸೂಚಿಸಿದ್ದರೂ ಸಹ, ಯುದ್ಧಭೂಮಿಯಿಂದ ಆಹಾಬನು ಸತ್ತನು ಮಾತು ಕೇಳುವ ಸಮಯವು ಬೇಗನೇ ಕೈಗೆ ಬರುವದು ಎಂಬುದನ್ನು ಇದು ಸೂಚಿಸುವುದಾಗಿದೆ. ಈಜೆಬೆಲಳಿಗೆ ಬಹಶಃ ನಾನೂರು ತಲೆಗಳು ಬೇಕಾಗಿರಬಹುದು!

> ಆಗ ಇಸ್ರಾಯೇಲ್ಯರ ಅರಸರು (ಸೇವಕರಿಗೆ) "ಮಿಕಾಯೆಹುವನ್ನು ಹಿಡಿದುಕೊಂಡು ಹೋಗಿ ಪುರಾಧಿಕಾರಿಯಾದ ಅಮೋನನಿಗೂ ರಾಜಪುತ್ರನಾದ ಯೋವಾಶನಿಗೂ[30] ಒಪ್ಪಿಸಿ ಅವರಿಗೆ - ನಾನು ಸುರಕ್ಷಿತನಾಗಿ ಹಿಂದಿರುಗುವವರೆಗೂ ಇವನನ್ನು ಸೆರೆಯಲ್ಲಿಟ್ಟು ಸೆರೆಮನೆಯ ಅನ್ನಪಾನಗಳನ್ನೇ ಕೊಟ್ಟು ಕುಗ್ಗಿಸಬೇಕೆಂದು ಅರಸನು ಅನ್ನುತ್ತಾನೆ ಎಂದು ಹೇಳಿರಿ ಎಂಬುದಾಗಿ ಆಜ್ಞಾಪಿಸಿದನು" (ವಚನಗಳು 26, 27).

ಮಿಕಾಯೆಹುವು ಸೆರೆಮನೆಗೆ ತಿರುಗಿ ಹೋಗಬೇಕಾಯಿತು. ಆಹಾಬನಿಗೆ "ಒಳ್ಳೆಯ" ಸಂಗತಿಗಳನ್ನು ಮಾತನಾಡದೇ ಇರುವುದಕ್ಕೆ ಶಿಕ್ಷೆಯಾಗಿ ಅತ್ಯಲ್ಪವಾದ ಆರೈಕೆಯ ಶಿಕ್ಷೆ ಇದಕ್ಕೆ ಜೋಡಿಸಲ್ಪಟ್ಟಿತು. ಅನೇಕರು ಕಂಡುಕೊಂಡಂತೆ ಇದು ಸತ್ಯವನ್ನು ಹೇಳುವಲ್ಲಿ ತೊಂದರೆ ಯನ್ನು ತಂದುಕಳ್ಳುವುದು ಸಹಜವಾದದ್ದಾಗಿದೆ.

"ನಾನು ಸುರಕ್ಷಿತನಾಗಿ ಹಿಂದಿರುಗುವವರೆಗೂ" ಎಂಬ ಪದಗಳನ್ನು ಉಪಯೋಗಿ ಸುವಲ್ಲಿ ಆಹಾಬನು ಮಿಕಾಯೆಹುವಿಗೆ "ನಾನು ನಿನ್ನನ್ನು ನಂಬಲಾರೆನು. ನಾನು ಯುದ್ಧದಲ್ಲಿ ಸಾಯಲಾರೆನು" ಎಂದು ಹೇಳುವಂತಿತ್ತು. ಮಿಕಾಯೆಹುವನ್ನು ತೆಗೆದುಕೊಂಡು ಹೋಗು ತ್ತಿದ್ದಂತೆಯೇ ಆತನು ಆಹಾಬನ ಮಾತನ್ನೇ ಆತನಿಗೆ ಮರಳಿಸಿದನು "ನೀನು ಸುರಕ್ಷಿತನಾಗಿ ಬರುವುದಾದರೆ ನಾನು ನುಡಿದ್ದದ್ದು ಯೆಹೋವನ ಮಾತಲ್ಲವೆಂದು ತಿಳಿದುಕೋ." ಪ್ರವಾದಿಯ ಪರೀಕ್ಷೆಯಲ್ಲಿ ಆತನ ಮಾತು ಒಂದು ರೀತಿಯಲ್ಲಿ ಸರಿಯಾಗಿಯೇ ಬರುತ್ತದೆ (ಧರ್ಮೋಪದೇಶ ಕಾಂಡ 18:20-22).[31] ಮಿಕಾಯೆಹುವು "ಎಲ್ಲಾ ಜನರೇ ಇದನ್ನು ಕೇಳಿರಿ" (ವಚನ 28). ಎಂಬ ಇನ್ನೊಂದನ್ನು ಸೇರಿಸಿದನು. ಇಬ್ರಿಯ ಪದದಿಂದ ಭಾಷಾಂತರವಾದ "ಜನರು" ಎಂಬುದು ಯಾವಾಗಲೂ ಅನ್ಯಜನಾಂಗವನ್ನು ಸೂಚಿಸುವುದಾಗಿತ್ತು. ಎಲ್ಲಡೆಯೂ ಇರುವ ಜನರಿಗಾಗಿ ಇದು ಒಂದು ಪಾಠವಾಗಿದೆ.

ಅಹಾಬನಿಗೆ ಅದು ಏನಾದರೂ ಮುಟ್ಟಿತೇ? ಖಂಡಿತವಾಗಿ ಇಲ್ಲ. ಆತನು ಕೊನೆಯ ತನಕ ಸತ್ಯವನ್ನು ನಿರಾಕರಿಸಿದನು.

## ನಾವು ಸತ್ಯವನ್ನು ನಿರಾಕರಿಸಿದ್ದೇ ಆದರೆ ಇಕ್ಕಟ್ಟುಗಳು ಅನಿವಾರ್ಯವಾದವುಗಳು (22:29-39)

ಆಹಾಬ ಮತ್ತು ಯೆಹೋಷಾಫಾಟರು ತಮ್ಮ ಯೋಜನೆಯಂತೆ ಮುಂದುವರೆದರು,

ರಾಮೋತ್ ಗಿಲ್ಯಾದನ್ನು ಅಂತಿಮವಾಗಿ ಎದುರಿಸಲು ಹೊರಟರು (ವಚನ 29).

ಆಹಾಬನಂಥ ಪಾತ್ರದಿಂದ ನಾವೇನನ್ನು ಕಲಿಯಬಹುದು, ಮಿಕಾಯೆಹುವು ಎಚ್ಚರಿಕೆಯನ್ನು ಕೊಟ್ಟಿದ್ದಾಗ್ಯೂ ಆತನು ಯುದ್ಧಕ್ಕೆ ಹೋದದ್ದರಿಂದ ಅದನ್ನು ನಾವು ತಿಳಿದುಕೊಳ್ಳಬೇಕು. ಅದರೊಡನೆ ಯೆಹೋವನನ್ನು ವಿಚಾರಿಸಲು ಆತನು ತಿಳಿಸಿದ ನಂತರವೂ ಯೆಹೋಷಾಫಾಟನೂ ಸಹ ಯಾಕೆ ಹೀಗೆ ಮಾಡಿದನು, ಎಂಬುದು ಅರಿತು ಕೊಳ್ಳಲು ಕಷ್ಟವೆನ್ನಿಸುತ್ತದೆ. ಬಹುಶಃ ಯೆಹೋಷಾಫಾಟನು ಆಳವಾಗಿ ಒಳಗೆ ಹೋಗಿದ್ದನು. ಹೀಗೆ ಅದರಿಂದ ಸುಲಭವಾಗಿ ಹೊರಬರಲು ಆಗುವುದಿಲ್ಲ ಎಂದು ಆತನು ಆಲೋಚಿಸಿರಬಹುದು. ಸತ್ಯದೊಡನೆ ರಾಜಿಮಾಡಿಕೊಳ್ಳುವದು ನಮ್ಮನ್ನು ಕಷ್ಟದೊಳಗೆ ಆಳವಾಗಿ ಇರಿಸುತ್ತದೆ. ಯೆಹೋಷಾಫಾಟನು ತನ್ನ ಪ್ರಾಣವನ್ನು ಕಳೆದು ಕೊಳ್ಳುವುದಕ್ಕೆ ಹತ್ತಿರವಾಗುತ್ತಾ ಇದ್ದನು!

ಆಹಾಬನು ಜಾರಿಕೊಂಡು "ನಾನು ಸುರಕ್ಷಿತವಾಗಿ ಹಿಂದಿರುಗುವೆನು" (ವಚನ 27) ಎಂದು ಹೇಳುವ ಮೂಲಕ ಮಿಕಾಯೆಹುವಿನ ಎಚ್ಚರಿಕೆಯನ್ನು ತಿರಸ್ಕರಿಸಿದನು. ಆದರೂ ಆತನು ಇನ್ನೂ ನಿಸ್ಸೆತೀಜನಾಗಿದ್ದನು. ಅವರು ಯುದ್ಧಕ್ಕಾಗಿ ಸಿದ್ಧತೆಯನ್ನು ಮಾಡಿಕೊಳ್ಳುತ್ತಿರುವಾಗ, ಆಹಾಬನು ಅನೇಕ ರಾತ್ರಿಗಳವರೆಗೆ ಸಂಭವಿಸಿದ್ದೆಲ್ಲದರ ಬಗೆಗೆ ಮತ್ತು ಹೇಳಿದೆಲ್ಲವುಗಳೆಲ್ಲವುಗಳ ಬಗೆಗೆ ಯೋಚಿಸಿದನು:

> "... ಅವನ (ಬೆನ್ಹದದನ) ಪ್ರಾಣಕ್ಕೆ ಬದಲಾಗಿ ನಿನ್ನ ಪ್ರಾಣವು ಹೋಗುವದು ..." (20:42).
>
> "ನಾಯಿಗಳು ನಾಬೋತನ ರಕ್ತವನ್ನು ನೆಕ್ಕಿದ ಸ್ಥಳದಲ್ಲಿಯೇ ನಿನ್ನ ರಕ್ತವನ್ನೂ ನೆಕ್ಕುವವು ..." (21:19).
>
> "ಇಸ್ರಾಯೇಲ್ಯರೆಲ್ಲರೂ ಕುರುಬನಿಲ್ಲದ ಕುರಿಗಳಂತೆ ... ಚದುರಿಹೋದದ್ದನ್ನು ಕಂಡೆನು ... ನಿನ್ನ ವಿಷಯದಲ್ಲಿ ... ಅಸತ್ಯವನ್ನಾಡುವ ಆತ್ಮವನ್ನು ಕಳುಹಿಸಿದ್ದಾನೆ" (22:17, 23).

ಯುದ್ಧದ ದಿನದಿಂದ, ಆಹಾಬನು ಒಡೆದು ಹೋದದಷ್ಟು ನಿಸ್ತೇಜನಾಗಿದ್ದು. ಸಾಮಾನ್ಯವಾಗಿ ಅರಸನು ತನ್ನ ಯುದ್ಧಕವಚವನ್ನು ಹಾಕಿಕೊಳ್ಳುತ್ತಿದ್ದನು ಮತ್ತು ಯುದ್ಧಕವಚದ ಮೇಲೆ ರಾಜಪೋಷಾಕನ್ನು ಧರಿಸಿಕೊಳ್ಳುತ್ತಿದ್ದು, ನಂತರ ಅವನು ಸೈನ್ಯದ ನಾಯಕನಾಗಿ ಅದನ್ನು ನಡೆಸುತ್ತಿದ್ದನು. ಬದಲಾಗಿ, ಆಹಾಬನು ಯೆಹೋಷಾಫಾಟನಿಗೆ, "ನಾನು ವೇಷಹಾಕಿಸಿಕೊಂಡು ರಣರಂಗಕ್ಕೆ ಬರುವೆನು; ನೀನಾದರೋ *ನಿನ್ನ* ರಾಜ ವಸ್ತ್ರಗಳನ್ನು ಧರಿಸಿಕೋ" ಎಂದಿದೆ (ವಚನ 30ಎ; ಒತ್ತಿ ಹೇಳಿದ್ದು ನನ್ನದು). ಆಹಾಬನು ತನ್ನ ಮೇಲೆ ಮತ್ತು ಯೆಹೋಶಾಫಾಟನ ಮೇಲೆಯೂ ಲಕ್ಷವು ಇರಬೇಕೆಂದು ಬಯಸುವವನಾಗಿದ್ದನು. ತಿರುಗಿ ನಾವು ಕೇಳಬಹುದು "ಯೆಹೋಷಾಫಾಟನು ಯಾಕೆ ಇದಕ್ಕೆ ಒಪ್ಪಿದನು?" ಎಂದನು. ಆತನಿಗೆ ಹೊರಗೆ ಬರುವ ಮಾರ್ಗವೇ ಇರಲಿಲ್ಲ. ಆತನು ಜೇಡನ ಬಲೆಯಲ್ಲಿ ಸಿಕ್ಕ ಹುಳುವಿನಂತಿದ್ದನು; ಆತನು ಎಷ್ಟು ಕಷ್ಟಪಡುತ್ತಿದ್ದನೋ, ಅಷ್ಟೇ ಹೆಚ್ಚಾಗಿ ಆತನು ತೊಡರಿನಲ್ಲಿ ಸಿಕ್ಕಿಕೊಳ್ಳುತ್ತಾ ಹೋದನು.

"ನೀವು ಶತ್ರುಗಳ ಸಾಧಾರಣದ ಸೈನಿಕರನ್ನೂ ಅಧಿಪತಿಗಳನ್ನೂ ಬಿಟ್ಟು ಇಸ್ರಾಯೇಲ್ಯರ ಅರಸನಿಗೆ ಗುರಿಯಿಡಿರಿ" (ವಚನ 31). ಎಂದು ಬೆನ್ಹದದನು ತನ್ನ ಮೂವತ್ತೆರಡು ಅಧಿಪತಿಗಳಿಗೆ[32] ಕೊಟ್ಟ ಸೂಚನೆಗಳನ್ನು ಆಹಾಬನಿಗೆ ತಿಳಿದೊಡನೆಯೇ ಆತನು ಹೆಚ್ಚು ನಿಸ್ತೇಜನಾದನು. "ಅದು ಏನನ್ನೇ ತೆಗೆದುಕೊಳ್ಳಲಿ, ಆಹಾಬನನ್ನು ಹುಡುಕಿರಿ ಮತ್ತು ಆತನನ್ನು ಕೊಲ್ಲಿರಿ!" ಎಂದು ಅವರಿಗೆ ತಿಳಿಸಲ್ಪಟ್ಟಿತ್ತು. (ಅಧ್ಯಾಯ 20ರಲ್ಲಿ ದೇವರು ಆಹಾಬನಿಗೆ ವಿಜಯವನ್ನು ದಯಪಾಲಿಸಿದ ನಂತರ ತಿರುಗಿಕೊಂಡ ಆಹಾಬನಿಗೆ ಈ

ಸೂಚನೆಯು "ಸಹೋದರ" ನಿಂದ ಕೊಡಲ್ಪಟ್ಟಿತು!)

"ಹೀಗೆ ಇಸ್ರಾಯೇಲ್ಯರ ಅರಸನು ವೇಷ ಹಾಕಿಕೊಂಡು ರಣರಂಗಕ್ಕೆ ಹೋದನು" (ವಚನ 30ಬಿ). ತನ್ನ ರಾಜವಸ್ತ್ರಗಳನ್ನು ಹಾಕಿಕೊಳ್ಳುವ ಬದಲು ಆತನು ಆಹಾಬನು ತನ್ನನ್ನು ತಾನು ಸಾಮಾನ್ಯ ಸೈನಿಕನಂತೆ ಬಟ್ಟೆಯನ್ನು ಧರಿಸಿದನು.

ಯುದ್ಧವು ಅತ್ಯುಗ್ರವಾದಂತೆ, ಬೆನ್ಹದದನ ಮೂವತ್ತೆರಡು ಅಧಿಪತಿಗಳು ಯೆಹೋಷಾಫಾಟನ ರಾಜವಸ್ತ್ರಗಳನ್ನು ನೋಡಿದರು. ಆತನು ಆಹಾಬನಿರಬೇಕೆಂದು ಯೋಚಿಸಿ, ಆತನನ್ನು ಸುತ್ತುವರೆದರು. ಯೆಹೋಶಾಫಾಟನು ಅವರನ್ನು ನೋಡಿದಾಗ, ಆತನು "ಕೂಗಿಕೊಂಡನು" (ವಚನ 32). ಪೂರ್ವಕಾಲ ವೃತ್ತಾಂತದ ಲೇಖಕನು "ಯೆಹೋಷಾಫಾಟನು ಕೂಗಿಕೊಂಡಾಗ ದೇವರಾದ ಯೆಹೋವನು ಅವನಿಗೆ ನೇರವಾಗಿ ಶತ್ರುಗಳನ್ನು ಅವನ ಕಡೆಯಿಂದ ತೊಲಗಿಸಿದನು" (2 ಪೂರ್ವಕಾಲವೃತ್ತಾಂತ 18:31) ಎಂದು ಸೇರಿ ಸುತ್ತಾನೆ. ಹೀಗೆ ಈ ದೇವರ ಮನುಷ್ಯನು ಸಹಜವಾಗಿ ಕರ್ತನೆಡೆಗೆ ಬಿಡುಗಡೆಗಾಗಿ ಕೂಗಿಕೊಂಡನು. ದೇವರ ಎಚ್ಚರಿಕೆಯ ನಂತರವೂ ಯುದ್ಧಕ್ಕೆ ಹೋಗುವ ಹುಚ್ಚು ಸಾಹಸವನ್ನು ಹೊಂದಿದಾಗ್ಯೂ ಆತನ ಕೂಗು ಆತನನ್ನು ರಕ್ಷಿಸಿತು. "ಆಗ ಇವನು ಇಸ್ರಾಯೇಲ್ಯರ ಅರಸನಲ್ಲವೆಂಬುದು ರಥಬಲದ ಅಧಿಪತಿಗಳಿಗೆ ಗೊತ್ತಾದಾಗ ಅವರು ಅವನನ್ನು ಬಿಟ್ಟು ಹಿಂದಿರುಗಿದರು" (ವಚನ 33).

ಇದನ್ನು ನೋಡಿದಾಗ ಆಹಾಬನ ತಂತ್ರವು ಕಾರ್ಯಮಾಡಿತ್ತು. ಆತನು ಮೂವತ್ತೆರಡು ಅಧಿಪತಿಗಳಿಂದ ಅಡಗಿಕೊಳ್ಳುವುದನ್ನು ಹೇಗೋ ನಿರ್ವಹಿಸಿದನು. ಆದರೆ ದೇವರಿಂದ ಯಾರೂ ಕೂಡಾ ಅಡುಗಲಾರರು. "ಈಗ ಆರಾಮ್ಯರ ಒಬ್ಬ ಸೈನಿಕನು ಯಾರಿಗೂ ಗುರಿಯಿಡದೆ ಬಣವನೆನಸೆಯಲು ಆ ಬಾಣವು ಇಸ್ರಾಯೇಲರ ಅರಸನಿಗೆ ಅವನ ಕವಚದ ಸಂದಿನಲ್ಲಿ ತಾಗಿತು" (ವಚನ 34ಎ). ಯೆಹೂದಿ ಸಂಪ್ರದಾಯವು ಇವನು ಸಮಾನ್ಯನಾಗಿದ್ದವನು ಎಂದು ಹೇಳುತ್ತದೆ, ಆದರೆ ಇದು ಒಬ್ಬ ಅನುಭವವುಳ್ಳ ಪಳಗಿದವನೊಬ್ಬನು ಈ ರೀತಿ ಗಾಳಿಯಲ್ಲಿ ಅಡ್ಡಾದಿಡ್ಡಿ ಬಾಣಬಿಡುವದು ಅಸಾಧ್ಯವಾದಂತದ್ದು. ಅನನುಭವಿಯಾದ ಸೈನಿಕನು ತನ್ನ ಮೊದಲ ಯುದ್ಧಕ್ಕಾಗಿ ಸೇರಿದ್ದು, ಮರಣಕ್ಕೆ ಭಯಪಡುವವನು ಮತ್ತು ಬಾಣಗಳನ್ನು ಎಷ್ಟು ಸಧ್ಯವೋ ಅಷ್ಟು ಜೋರಾಗಿ ಪ್ರತಿಯೊಂದು ದಿಕ್ಕಿನಲ್ಲಿ ಬಿಡುವವನೂ ಆಗಿದ್ದನು. ದೇವರ ಕೃಪೆಯಲ್ಲಿ, ಅದರಲ್ಲಿ ಒಂದು ಬಾಣವು ಆಹಾಬನ ಯುದ್ಧಕವಚದ ಸಂಧಿಯಲ್ಲಿ ಸಿಕ್ಕು ಗುರುತುಮಾಡಿತು. ಇಂಥ ಕವಚಗಳು ದೇಹದ ಮುಖ್ಯ ಅಂಗಗಳನ್ನು ರಕ್ಷಿಸುವಂತವುಗಳಾಗಿದ್ದು; ಸಂದಿಯಲ್ಲಿ ಬಿರುಕುಗಳು ಇರುತ್ತಿದ್ದವು. ಬಾಣವು ಬೇಧ್ಯವಾಗುವಂತ ಜಾಗದಲ್ಲಿ ನಾಟಿತು ಮತ್ತು ಆಹಾಬನ ದೇಹವನ್ನು ಬೇಧಿಸಿತು.[33] ಹೀಗೆ ಆತನ ರಕ್ತನಾಳಗಳು ಘಾಸಿಯಾದವು; ರಕ್ತವು ಹರಿಯಲು ಆರಂಭಿಸಿತು.

"ಆಗ ಅವನು [ಆಹಾಬನು] ತನ್ನ ಸಾರಥಿಗೆ ರಥವನ್ನು ತಿರುಗಿಸಿ, ನನ್ನನ್ನು ರಣರಂಗದಿಂದ ಆಚೆಗೆ ತೆಗೆದುಕೊಂಡು ಹೋಗು; ನನಗೆ ದೊಡ್ಡ ಗಾಯವಾಗಿದೆ ಎಂದು ಹೇಳಿದನು" (ವಚನ 34ಬಿ). "ತಿರುಗಿಸು! ತಿರುಗಿಸು" ಆಹಾಬನು ತನ್ನ ಸಾರಥಿಗೆ ಕೂಗಿ ಹೇಳಿದನು. ಹೇಗೋ, "ಆ ದಿನ ಯುದ್ಧವು ಬಲು ಘೋರವಾಗಿತ್ತು" (ವಚನ 35ಎ). ಹೋರಾಟವು ಬಲು ಚುರುಕಾಗಿದ್ದರಿಂದ ಸಾರಥಿಗೆ ಆಹಾಬನ ಆಜ್ಞೆಗೆ ಅವಿಧೇಯನಾಗಲು ಆಗಿರಲಿಲ್ಲ. ಅಂತಿಮವಾಗಿ ಆಹಾಬನು ಬಹಳ ರಕ್ತವನ್ನು ಕಳೆದು ಕೊಂಡನು ಅದು ನಿಲ್ಲಲೇ ಇಲ್ಲ. ತನ್ನ ಸೇವಕನ ಸಹಾಯದಿಂದ ಆತನು ತನ್ನನ್ನು ತಾನು ರಥಕ್ಕೆ ಊಕೊಂಡು ಕೂತನು (ವಚನ 35ಬಿ; 2 ಪೂರ್ವಕಾಲವೃತ್ತಾಂತ 18:34).[34] ಆತನ ರಕ್ತವು ರಥದ ಮೆಟ್ಟಿಲ ಮೇಲೆ ಹರಿಯತೊಡಗಿತು. "ಆತನು ಸಾಯಂಕಾಲದಲ್ಲಿ ಸತ್ತನು" (2 ಪೂರ್ವಕಾಲವೃತ್ತಾಂತ 18:34).

ಮಿಕಾಯೇಹುವು ಮುನ್ನುಡಿದಂತೆ ಆಹಾಬನು ಸತ್ತವನಾಗಿ ಸಿಕ್ಕನು (ವಚನ 17). "ಪ್ರತಿಯೊಬ್ಬನೂ ತನ್ನ ಪ್ರಾಂತ್ಯಕ್ಕೂ ಪಟ್ಟಣಕ್ಕೂ ಹೋಗಲಿ ಎಂಬ ಕೂಗು ಇಸ್ರಾಯೇಲ

ಸೈನ್ಯದಲ್ಲಿ ಹಚ್ಚಿಕೊಂಡಿತು" (ವಚನ 36) ಅವರು ಅರಸನು ಸಾಯಲು ಅವನನ್ನು ಸಮಾರ್ಯಕ್ಕೆ ತಂದು ಅಲ್ಲಿ ಸಮಾಧಿಮಾಡಿದರು (ವಚನ 37), ನಂತರ ಆತನ ರಕ್ತಸಿಕ್ತವಾದ ರಥವನ್ನು ಪಟ್ಟಣದ ಹೊರಗಿರುವ ಕೆರೆಗೆ ಒಯ್ದರು.

> ದೇವದಾಸಿಯರು ಸ್ನಾನಮಾಡುವ (ಈಗ ವೇಶ್ಯೆಯರು[35] ಅಲ್ಲಿ ಮೈ ತೊಳೆಯುತ್ತಾರೆ) ಸಮಾರ್ಯದ ಕೆರೆಯಲ್ಲಿ ಅವನ ರಥವನ್ನು ತೊಳೆಯುತ್ತಿದ್ದಾಗ ನಾಯಿಗಳು ಬಂದು ಅದರಲ್ಲಿದ್ದ ರಕ್ತವನ್ನು ನೆಕ್ಕಿದವು; ಹೀಗೆ ಯೆಹೋವನು ಹೇಳಿದ ಮಾತು ನೆರವೇರಿತು (ವಚನ 38).[36]

ಅವರು ರಥವನ್ನು ತೊಳೆಯುತ್ತಿದ್ದಾಗ ಅವರು ಅಲ್ಲಿ ದೇವದಾಸಿಯರ ಕೀಳು ಚಿತ್ರಗಳು ಮತ್ತು ಅನುಚಿತ ವೇಷಭೂಷಣಗಳು ಅವರಿಗೆ ಕಾಣಿಸಿದವು. ಆಹಾಬನ ರಕ್ತದ ಕೆಲಭಾಗವನ್ನು ಪಟ್ಟಣದಲ್ಲಿ ಚರ್ಮರೋಗದ ಬೀದಿನಾಯಿಗಳು ನೆಕ್ಕಿದವು ಮತ್ತು ಅಲ್ಲಿ ಸೇರಿಕೊಂಡ ನೀರಿನಲ್ಲಿ ದೇವದಾಸಿಯರು ಮೈತೊಳೆದ ನೀರಿನ ಭಾಗವೂ ಸೇರಿಕೊಂಡಿತು.

ಆ ಕಥೆಯು ವಚನ 39ರಲ್ಲಿ ಆಹಾಬನ ಜೀವಿತದ ಸಾರಾಂಶದೊಂದಿಗೆ, ಆತನು ಕಟ್ಟಿಸಿದ ಕಟ್ಟಡಗಳ ಪಟ್ಟಿಯೊಂದಿಗೆ ಸಮಾರೋಪಗೊಳ್ಳುತ್ತದೆ. ಅವು ಹೇಗೋ, ಚಿಕ್ಕ ಪರಿಣಾಮಗಳಾಗಿವೆ. ಪಟ್ಟಣಗಳು ಮತ್ತು ದಂತದ ಅರಮನೆಗಳು ಎಲ್ಲವೂ ಹೋದವು. ಕೊನೆಯಲ್ಲಿ, ಎಲ್ಲಾ ಸಂಗತಿಗಳಲ್ಲಿ ಆಹಾಬನು ಸತ್ಯವನ್ನು ನಿರಾಕರಿಸುವಲ್ಲಿ ಜೀವಿಸಿದನು ಮತ್ತು ಅವಹೇಳನಕ್ಕೊಳಗಾಗಿ ಸತ್ತನು.

## ಮುಕ್ತಾಯ

ಬೋಸ್ಟನ್ ಕೆಲ್ಟಿಕ್ಸದ ನಾಯಕನಾದ ರೆಗ್ಗಿ ಲವಿಸ್‌ರವರು ಜುಲೈ 27, 1993ರಲ್ಲಿ ತನ್ನ ಸ್ನೇಹಿತರೊಡನೆ ಬಾಸ್ಕೆಟಗಳನ್ನುಶೂಟ ಮಾಡುತ್ತಿರುವಾಗ ಹೃದಯಾಘಾತದಿಂದ ಮರಣಹೊಂದಿದರು ಎಂಬ ಸಂಗತಿಯಿಂದ ಅಮೇರಿಕವು ಸ್ಥಂಭೀಭೂತವಾಗಿತು. ಮೂರು ತಿಂಗಳ ಮೊದಲು, ರೆಗ್ಗಿಯವರು ನಿರ್ಣಾಯಕ ಆಟದ ಆರಂಭದಲ್ಲಿ ಕುಸಿದುಬಿದ್ದಿದ್ದರು ಹನ್ನೆರಡು ಜನ ಹೃದ್ರೋಗಿ ವೈದ್ಯರ ತಂಡವು ಅವರಿಗೆ ಹೃದಯವು ಗಂಭೀರವಾದ ಸ್ಥಿತಿಯನ್ನು ಹೊಂದಿದೆ ಎಂದೂ ಮತ್ತು ಬಾಸ್ಕೆಟಬಾಲ ಆಟವನ್ನು ಹೆಚ್ಚಾಗಿ ಆಡಬಾರದು ಎಂದು ಕೂಡ ಸಲಹೆ ಮಾಡಿದ್ದರು. ರೆಗ್ಗಿಯು ತನ್ನನು ತಾನೇ ಆಸ್ಪತ್ರೆಯ ಹೊರಗೆ ಪರಿಕ್ಷಿಸಿಕೊಂಡರು ಮತ್ತು ಇನ್ನೊಬ್ಬ ವೈದ್ಯರ ಅಭಿಪ್ರಾಯವನ್ನು ಪಡಕೊಂಡರು. ಈ ಸಮಯದಲ್ಲಿ ಅವರಿಗೆ ಅವರ ಸ್ಥಿತಿಯು ಜೀವಕ್ಕೆ ಅಪಾಯತರುವಂತಹದ್ದಿಲ್ಲ ಮತ್ತು ಔಷಧಿಗಳಿಂದ ಮತ್ತು ಥೆರಪಿಗಳಿಂದ ನಿಯಂತ್ರಿಸ ಬಹುದು ಎಂಬುದಾಗಿ ಹೇಳಲ್ಪಟ್ಟಿತು. ಹೀಗೆ ರೆಗ್ಗಿಯವರು ಮೊದಲನೆಯ ಅಭಿಪ್ರಾಯವು ಎರಡನೆಯ ಅಭಿಪ್ರಾಯಕ್ಕಿಂತ ಉತತಮವೆಂದು ಅದನ್ನು ಒಪ್ಪಿದರು; ಇದು ಯಾವುದನ್ನು ಅವರು ಕೇಳಲು ಬಯಸಿದ್ದರೋ ಅದೇ ಆಗಿತ್ತು;[37] ಅವರು ಈ ಒಳ್ಳೆಯ ವರದಿಯು ಬಂದ ಕೆಲವೇ ತಿಂಗಳಲ್ಲಿ ಬಾಸ್ಕೆಟ ಬಾಲ್ ಶೂಟ ಮಾಡುತ್ತಿದ್ದಾಗಲೇ ಅವರು ಮರಣಹೊಂದಿದರು.

ಅನೇಕ ಜನರು ಸತ್ಯವು ತಾವು ಬಯಸಿದ್ದರ ಕಡೆಗೆ ಆಗಬೇಕೆಂದು ಬಯಸುವವರಾಗಿತ್ತಾರೆ ಎಂದು ಇದು ಹೇಳುವಂತದ್ದಾಗಿದೆ, ಆದರೆ ಕೆಲವರು ಸತ್ಯದ ಕಡೆಗೇ ಇರಲು ಬಯಸುವವರಾಗಿರುತ್ತಾರೆ. ಆಹಾಬನ ದುರಂತ ಕಥೆಯು ಬಲುಕಠಿಣ ಹೃದಯವನ್ನು ಕೂಡಾ ಒಪ್ಪಿಸುವಂತದ್ದಾಗಿದ್ದು ಅದು ನಾವು ಸತ್ಯದ ಬಗೆಗೆ ಮತ್ತು "ಸತ್ಯವಲ್ಲದೇ ಮತ್ತೆನಲ್ಲದ್ದರ" ಬಗೆಗೆ ಲಕ್ಷಹರಿಸುವವರಾಗಿರಲೇಬೇಕು ಎಂದು ತಿಳಿಸುತ್ತದೆ.

ನಾವು ಈ ಪಾಠವನ್ನು ಮುಗಿಸುವ ಮುನ್ನ ಇನ್ನೊಂದು ಸಂಗತಿಯೆಡೆಗೆ ಗಮನಹಿಸುವಾ: ಸತ್ಯವು ಕ್ರಿಸ್ತನು ಮತ್ತು ಆತನ ವಾಕ್ಯಗಳಿಂದ ಬೇರ್ಪಟ್ಟಿಲ್ಲ. "ನಾನೇ ... ಸತ್ಯವಾಗಿದ್ದೇನೆ" ಎಂದು ಯೇಸು ಹೇಳಿದನು (ಯೋಹಾನ 14:6).[38] "ಸತ್ಯವು ಯೇಸುವಿನಲ್ಲಿದೆ" (ಎಫೆಸ

4:21) ಎಂದು ಪೌಲನು ಒತ್ತಿಹೇಳಿದನು. ಯೇಸುವು ಈ ಭೂಮಿಯನ್ನು ಬಿಟ್ಟು ಹೋದ ಮೇಲೆ, ಆತನು ತನ್ನ ಅಪೊಸ್ತಲರಿಗೆ "ಹೊಸ ಒಡಂಬಡಿಕೆಯ ಯೇಸುವಿನ ಪ್ರಕಟಣೆಯನ್ನು ಅರುಹುವ "ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರುವಲ್ಲಿ" (ಯೋಹಾನ 16:13) ಮಾರ್ಗದರ್ಶನ ನೀಡಲು ಪವಿತ್ರಾತ್ಮನನ್ನು ಕಳುಹಿಸಿದನು. ನಮ್ಮ ದೇವರು ಸತ್ಯವನ್ನು ನಂಬಲು ಮತ್ತು ಆತನು ತನ್ನ ಅಪೋಸ್ತಲರ ಮೂಲಕ ಪ್ರಕಟಿಸಿದ ಸತ್ಯಕ್ಕೆ ವಿಧೇಯರಾಗಲು ನಮಗೆ ಸಹಾಯಮಾಡಲಿ!

---

ಟಿಪ್ಪಣಿಗಳು

[1]"ದಾಖಲೆಯಂತೆ" ಇದು ಸಾಧ್ಯತೆಯಿರುವುದರಿಂದ ಅಲ್ಲಿ ಮೊದಲು ಸಂಬಂಧವು ಇರಬಹುದು ಎಂಬುದನ್ನು ನಾವು ಒತ್ತಿ ಹೇಳುತ್ತೇನೆ. ಉದಾಹರಣೆಗಾಗಿ, ಯೆಹೋಶಾಫಾಟನು ಮತ್ತು ಆಹಾಬರು ಖಚಿತವಾಗಿ ತಮ್ಮ ಮಕ್ಕಳ ಮದುವೆಯಲ್ಲಿ ಭೇಟಿಯಾಗಿರಬಹುದು. [2]ಇದೇ ಮೊದಲಬಾರಿ ಈ ಸರಣಿಯಲ್ಲಿ ಪೂರ್ವಕಾಲ ವೃತ್ತಾಂತದ ಸಮಾನವಾದ ಹೋಲಿಕೆಗಳನ್ನು ನಾವು ಕಾಣುತ್ತೇವೆ (2 ಪೂರ್ವಕಾಲ ವೃತ್ತಾಂತ 18). ಇದಕ್ಕೆ ಕಾರಣವು ಪೂರ್ವಕಾಲವೃತ್ತಾಂತಗಳು ದಕ್ಷಿಣದ ರಾಜ್ಯವಾದ ಯುದಾಯದ ಜೊತೆ ಸಂಬಂಧಿತವಾದದ್ದು ಹೊರತಾಗಿ ಉತ್ತರದ ಇಸ್ರಾಯೇಲ ರಾಜ್ಯಕ್ಕೆ ಅಲ್ಲ. ಯೆಹೋಷಾಫಾಟನು ಈ ಘಟನೆಯಲ್ಲಿ ಭಾಗಿಯಾಗಿದ್ದರಿಂದ, ಇದು ಪೂರ್ವಕಾಲ ವೃತ್ತಾಂತದಲ್ಲಿ ದಾಖಲಿತವಾಗಿದೆ. [3]KJV ಯಲ್ಲಿ "ಸಮಯೋಚಿತವಾದ ಸಾಮ್ಯಗಳು" ಎಂದಿದೆ. [4]2 ಅರಸು 8:18, 27ನ್ನು ನೋಡಿರಿ. [5]2 ಪೂರ್ವಕಾಲವೃತ್ತಾಂತ 17:3, 4. [6]ಯುದಾಯವನ್ನು ಲಕ್ಷಕ್ಕೆ ತಂದುಕೊಂಡರೆ ಇದು ವಿನಾಶಕಾರಕವಾದದ್ದು. ಅಥಲ್ಯೆಲಳು ಯುದಾಯದಲ್ಲಿ ಬಾಳನ ಆರಾಧನೆಯನ್ನು ಪರಿಚಯಿಸಿದಳು. ಅಹಜ್ಯನ ಮರಣಾನಂತರ, ಅವಳು ದಾವೀದನ ಮನೆಯಲ್ಲಿ ರಾಜವಂಶದವರೆಲ್ಲರನ್ನೂ (ತನ್ನ ಮೊಮ್ಮಕ್ಕಳನ್ನೂ ಒಳಗೊಂಡು) ಕೊಲ್ಲಲು ಪ್ರಯತ್ನಿಸಿದಳು (ಯೋವಾಷನು ಮಾತ್ರ ತಪ್ಪಿಸಿಕೊಂಡನು), ಹೀಗೆ ಅವಳು ಸಿಂಹಾಸನದ ಮೇಲೆ ಕೂತಳು. [7]2 ಪೂರ್ವಕಾಲ ವೃತ್ತಾಂತ 19:2, 3. [8]1 ಅರಸು 22:32 ಹೋಲಿಸಿ. [9]ಮತ್ತಾಯ 5:9. [10]1 ಅರಸು 17:1.

[11]2 ಪೂರ್ವಕಾಲ ವೃತ್ತಾಂತ 6:14-17ನ್ನು ಗಮನಿಸಿರಿ. ಎರಡನೆಯ ಪೂರ್ವಕಾಲ ವೃತ್ತಾಂತ 20:35 ಯೆಹೋಷಾಫಾಟನು ಸಹ ಆಹಾಬನ ಮಗನಾದ ಅಹಜ್ಯನೊಡನೆ ಮದುವೆಯ ಸಂಬಂಧವನ್ನು ಮಾಡಿ "ಕೆಟ್ಟವನಂತೆ ನಡೆದನು" ಎಂದು ಹೇಳುತ್ತದೆ. [12]1 ಸಮುವೇಲ 23:2, 4 ನೋಡಿರಿ. [13]ಇತರ ಸಲಹೆಗಳೂ ಕೂಡಾ ಕೊಡಲ್ಪಟ್ಟಿವೆ. ಬಹುಶಃ ಆ ನಿಜಾಂಶವು ಇಬ್ರಿಯ ಹೆಸರುಗಳಲ್ಲಿ ಒಂದನ್ನು (ವಚನಗಳು 11, 24) ಸೂಚಿಸುವುದಾಗಿದ್ದು ಅವರು ಬಾಳ ಮತ್ತು ಅಶೇರು ದೇವತೆಗಳಿಂದ ತರಲ್ಪಟ್ಟ ಪ್ರವಾದಿಗಳಲ್ಲ. [14]1 ಅರಸು 14:7 ಹೋಲಿಸಿರಿ; 17:1 ಮುಂತಾದವುಗಳನ್ನು ನೋಡಿರಿ. [15]ಪೂರ್ವಕಾಲ ವೃತ್ತಾಂತದ ಲೇಖಕನು ಹೇಳುವುದೇನೆಂದರೆ ಪ್ರವಾದಿಗಳೂ ಕೂಡಾ ಎಲೋಹಿಮ್ ಎಂಬುದರಿಂದ (2 ಪೂರ್ವಕಾಲ ವೃತ್ತಾಂತ 18:5). "ದೇವರು" ಎಂಬ ಸಾಮಾನ್ಯವಾದ ಪದವನ್ನು ಬಳಸುತ್ತಿದ್ದರು. ಬಾಳನ ಅರಾಧಕರು ಬಾಳನನ್ನು "ಎಲೋಹಿಮ್" ಎಂಬಂತೆ ಸೂಚಿಸುತ್ತಿದ್ದರು. ನಾನು 1970ರಿಂದ "ನನ್ನ ಪ್ರಿಯ ದೇವರೇ" ಎಂಬ ಜನಪ್ರಿಯ ತಾಳಗತಿಯಲ್ಲಿನ ಹಾಡನ್ನು ನೆನಪಿಸಿಕೊಳ್ಳುತ್ತೇನೆ. ಅನೇಕ ಅಭಿಮಾನಿಗಳು ಯೋಚಿಸುವುದೇನೆಂದರೆ ಇದು ಯೇಸುವಿನ ಕುರಿತಾದ ಹಾಡು ಎಂದು, ಇದು ನಿಜವಾಗಿಯೂ ಒಬ್ಬ ಅನ್ಯಜನಾಂಗ ಆತ್ಮೀಕ ನಾಯಕನ ಬಗೆಗೆ ಇರುವ ಹಾಡಾಗಿದೆ. [16]"ಇದು" ಇಟಲಿ ಭಾಷೆಯಲ್ಲಿದ್ದು, ಇದು ಭಾಷಾಂತರಕಾರರಿಂದ ಸೇರಿಸಲ್ಪಟ್ಟಿದೆ ಎಂಬುದನ್ನು ಸೂಚಿಸುವಂತದ್ದಾಗಿದೆ. [17]ಇದು ಹಳೆಯ ಒಡಂಬಡಿಕೆಯಲ್ಲಿನ ಸಾಮಾನ್ಯವಾದ ಹೆಸರಾಗಿದೆ. [18]ವಚನ 16 ಮತ್ತು 2 ಪೂರ್ವಕಾಲವೃತ್ತಾಂತ 18:7ನ್ನು ಸಹ ನೋಡಿರಿ ("ಎಂದೂ ಇಲ್ಲ … ಆದರೆ ಯಾವಾಗಲೂ"). [19]ಅಥವಾ, ನಾವು "ಚೆನಾನಗಿದೆ" ಎಂಬುದನ್ನು ಕೇಳಬಾರದು ಎನ್ನುವುದಾದರ, ನಾವು "ಒಂದು ದಿನಕ್ಕೆ ಒಂದು ಚಿಕ್ಕಗುಳಿಗೆಯನ್ನು ತೆಗೆದುಕೊಳ್ಳಿರಿ ಅದು ಆ ಸಮಸ್ಯೆಯ ಬಗೆಹರಿಸುತ್ತದೆ" ಎಂಬುದನ್ನು ಕೇಳಬಯಸುತ್ತೇವೆಯೇ. [20]ಇದೊಂದು ಎತ್ತರದ ಪ್ರದೇಶ, ಸ್ವಚ್ಛವಾದಂಥದ್ದು ಆದಿದ್ದು, ಧಾನ್ಯವನ್ನು ಕಸದಿಂದ ಬೇರ್ಪಡಿಸಲು ಬಳಸಲ್ಪಡುವದು ಆಗಿತ್ತು. ಇದು ಅರಸನ ಉದ್ದೇಶಕ್ಕೆ ಯೋಗ್ಯವಾದುದ್ದು ಆಗಿದೆ.

[21]ಆತನ ಹೆಸರಿನ ಅರ್ಥವು "ನ್ಯಾಯಾಧೀಶನಾದ ಯೆಹೋವ" ಎಂದಾಗಿದೆ. ಅವರು ಇದು ಉಚ್ಚರಿಸುವ ರೀತಿಯು ಅವರಿಗೆ ಮೆಚ್ಚಿಗೆಯಾದ ಕಾರಣದಿಂದಲೇ (ನಾವು ಈ ದಿನ ಮಾಡಿದಂತೆ) ಅಥವಾ ಅವರು ಕರ್ತನಿಗೆಗೌರವ ಕೊಡುವ ಕಾರಣದಿಂದಲೋ ಆತನ ಪಾಲಕರು ಆತನಿಗೆ ಈ

ಹೆಸರಿಟ್ಟಿರಬಹುದು. ಚಿದ್ಕೀಯನ ಪಾಲಕರು ಯೆಹೋವನಿಗೆ ಭಯಪಡುವ ಇಸ್ರಾಯೇಲರಾಗಿದ್ದರು, ಚಿದ್ಕೀಯನು ತಾನು ಹಿಡಿದ ಮಾರ್ಗವನ್ನು ಬಿಟ್ಟನು. [22]ಅನೇಕ ವಿಮರ್ಷಕರು ಪ್ರಜ್ಞೆಯಿಂದಲೇ ಅಥವಾ ಇಲ್ಲವ್ರೋ ಧರ್ಮೋಪದೇಶಕಾಂಡ 33:17ರಲ್ಲಿನ ಮೋಶೆಯ ಪದಗಳನ್ನು ಪ್ರತಿಧ್ವನಿಸುತ್ತಿದ್ದರು. [23]ಬಹುಶಃ ಆ ದೂತನು ನಾನೂರು ಜನಪ್ರವಾದಿಗಳ "ಏಕಮನಸ್ಸಿನ: ಸಂದೇಶವೆನೆಂದು ಹೇಳಿರ ಬಹುದು" ಬಹುಶಃ ದೇವರು ಅದನ್ನು ಹೇಳಿರಬಹುದು. [24]ನೀನು ಬಯಸಿದ್ದಾದರೆ, ನೀನು ಶೀಘ್ರದಲ್ಲಿ ಒಂದು ಪ್ರಾಯೋಗಿಕತೆಯನ್ನು ಹೀಗೆ ಕೊಡಬಹುದು ಒಬ್ಬನು ಕೆಲವನ್ನು "ನೀನು ಸುಂದರನಾಗಿದ್ದಿ!" ಈ ರೀತಿಯಲ್ಲಿ ಹೇಳಬಹುದು ಆದೆ ನಿಶ್ಚಿತವಾಗಿಯೂ ಅವನ ಮಾತಿನ ಅರ್ಥ ಅದಾಗಿರದು. ಬೈಬಲ್ ಇಂಥ ಅನೇಕ ವ್ಯಂಗ್ಯಾರ್ಥದ ಅಥವಾ ಚುಚ್ಚು ನುಡಿಗಳ ಉದಾಹರಣೆಗಳನ್ನು ಹೊಂದಿದೆ. [25]"ಪ್ರಬೋಧನೆ ಮಾಡು" ಇದರ ಅರ್ಥವು ನನಗೆ ಸತ್ಯವನ್ನೇ ಹೇಳು ಎಂದು ನಾನು ಪ್ರಮಾಣದಡಿಯಲ್ಲಿ ನಿನಗೆ ಭಿನ್ನವಿಸುತ್ತೇನೆ ಎಂದು ಆಗಿದೆ. [26]ಯೆಹೆಜ್ಕೇಲ, ಯೇಸು ಇತರರೂ ಕೂಡ ಈ ಪರಿಚ್ಛೇದವನ್ನು ಬಳಸಿದರು. [27]ಒಂದು ವೇಳೆ ನೀನು "ಆಟವನ್ನು ಆಡುವದು" ಎಂಬ ವಿಷೇಣವನ್ನು ಬಳಸುವುದನ್ನು ಉಳಿಸಲು ಬಯಸದಿದ್ದರೆ ಇದನ್ನು ನಾವು "ಮೋಸಕ್ಕೊಳಗಾಗುವೆವು" ಎಂಬ ರೀತಿಯಲ್ಲಿ ಬಳಸಬಹುದು. [28]Lewis Copeland, ed., *Popular Quotations for All Uses* (Garden City, N.Y.: Doubleday and Co., 1961), 469. [29]ಕೆಲವು ಚಿದ್ಕೀಯನು ನಡೆದುಕೊಂಡಂತಹ ನಿಜಾಂಶವು ಅಸ್ತವ್ಯಸ್ತಗೊಂಡದ್ದು ಹೀಗೆ ಇವುಗಳು ಆತನು ಮತ್ತು ಇತರ ಅಸ್ಥಾನದ ಪ್ರವಾದಿಗಳು ಪ್ರಾಮಾಣಿಕರಾಗಿದ್ದರು ಎಂಬುದನ್ನು ಸಾಧಿಸುವುದಾಗಿವೆ. ಅವರು ಪ್ರಾಮಾಣಿಕರಾಗಿದ್ದರೂ ಸಹ, ಚಿದ್ಕೀಯನ ಈ ಕ್ರಿಯೆಯು ಅದನ್ನು ಸಾಧಿಸಲಾರದು. ಅನೇಕ ಸುಳ್ಳುಗಾರರು ಅವರನ್ನು ಸುಳ್ಳುಗಾರು ಎಂದು ಕರೆದಾಗ ಕೋಪೋದ್ರೇಕಗೊಳ್ಳುತ್ತಾರೆ. [30]ಇವುಗಳು ಪ್ರತ್ಯಕ್ಷವಾಗಿ ಒಂದು ಸಾರಿ ಮಿಕಾಯೇಹುವಿನ ಮೇಲೆ ಆಕ್ರಮಣ ಮಾಡಿದ್ದರು.

[31]ಯೆರಮಿಾಯ 28:9 ಸಹ ನೋಡಿರಿ. [32]1 ಅರಸು 20:1, 16, 24ನ್ನು ನೋಡಿರಿ. [33]ಪಂಡಿತರು ಇದರ ಸರಿಯಾದ ಸ್ಥಳದ ಬಗೆಗೆ ಒಪ್ಪಲಾರರು. [34]ಆಹಾಬನು ಇದನ್ನು ತನ್ನ ಜನರ ಲಾಭಕ್ಕಾಗಿ ಮಾಡಿದನು ಎಂದು ಕೆಲ ಲೇಖಕರು ಹೇಳುತ್ತಾರೆ. ಹೇಗೋ ಆತನು ಯುದ್ಧಭೂಮಿಯಿಂದ ಹೊರಗೆ ಬರುವುದನ್ನು ಬಯಸುವುದನ್ನು ಇಲ್ಲಿ ಆತನು ಈಗಾಗಲೇ ತೋರಿಸಿರುವುದರಿಂದ, ಆತನು ಎಷ್ಟು ರೀತಿಯಲ್ಲಿ ಗಾಯಗೊಂಡಿದ್ದಾನೆ ಎಂದು ಆತನನ್ನು ನೋಡಿಲ್ಲವೆಂದೆ ತೋರಿಸಿಕೊಳ್ಳಲು ಹೀಗೆ ಮಾಡಿದನೆಂದು ಎಂದು ನಾನು ನೆನಿಸುತ್ತೇನೆ. [35]KJV ಯಲ್ಲಿ "ಯುದ್ಧಕವಚವು" ಯೆಹೂದಿ ಸಂಪ್ರದಾಯವನ್ನು ಪ್ರತಿಬಿಂಬಿಸುದಾಗಿದೆ ಎಂದಿದೆ. ಇಲ್ಲಿ ಕ್ರಿಯಾ ಪದವು ಬಳಿಕೆಯಾಗಿದ್ದು ಅದಕ್ಕೆ ಉಪಯುಕ್ತವಾದ ಪದವು "ವೇಷ್ಯೇಯರು" ಎಂದು. ಅನೇಕ ಆಧುನಿಕ ಭಾಷಾಂತರಗಳು "ವೇಷ್ಯೆಯರು" ಎಂದಿದೆ. ಇವರು ವೇಶ್ಯೆಯರಾಗಿದ್ದುಕೊಂಡು ಅಶೇರು ದೇವತೆಯ ದೇವಾಲಯಕ್ಕೆ ಸಂಬಂಧಿಸಿದಂತವರಾಗಿರಬಹುದು ಅಥವಾ ಇಲ್ಲದಿರಬಹುದು. ಹೀಗೆ ಲೇಖಕರು ಆಹಾಬನ ಅವಮಾನಕರ ಮರಣಕ್ಕೆ ಈ ವಿವರಗಳನ್ನು ಸೇರಿಸುವವರಾಗಿದ್ದಾರೆ. [36]ನಾಬೋತನ ರಕ್ತವು ಇಜ್ರೇಲಿನಲ್ಲಿ ಚೆಲ್ಲಲ್ಪಟ್ಟಿದ್ದರಿಂದ ಮತ್ತು ಆಹಾಬನ ರಕ್ತವನ್ನು ನಾಯಿಗಳು ಸಮಾರ್ಯದ ಹತ್ತಿರ ನೆಕ್ಕಿದ್ದರಿಂದ ಪ್ರವಾದನೆಯು ಇನ್ನೂ ಪರಿಪೂರ್ಣವಾಗಿಲ್ಲ ಎಂದು ಕೆಲವರು ಹೇಳುತ್ತಾರೆ. ಬರ್ಟನ್ ಕಾಫ್ ಮನ್‌ರವರ ಟಿಪ್ಪಣಿಯಂತೆ, (1) ಕೆಲ ಮೂಲ ಪ್ರವಾದನೆಗಳ ಸಂಗತಿಗಳಿಂದ ಆಹಾಬನ ತಾಳ್ಮೆಯು ಎಚ್ಚೆತ್ತುಕೊಂಡಿತು (1 ಅರಸು 21:27-29), ಮತ್ತು (2) "ಸ್ಥಳದ" ಸರಳ ಅರ್ಥವು "ಈಪ್ರದೇಶದಲ್ಲಿ" ಎಂದಾಗಿದೆ. ಇಜ್ರೇಲು ಮತ್ತು ಸಮಾರ್ಯವು ಇಸ್ರಾಯೇಲಿನಲ್ಲಿಯೇ ಕೇವಲ ಕೆಲ ಮೈಲಿಗಳಲ್ಲಿ ಅಂತರಲ್ಲಿ ಇವೆ. (See Burton Coffman, *Commentary on 1 Kings,* 299, 300.) [37]ಅವರು ಮೂರನೆಯ ಸಲಹೆಗಾಗಿ ಹೋಗಬೇಕೆಂದು ಅವರ ಹೆಂಡತಿಯು ಹೇಳಿದರು. ಪರಿಣಿತರ ಈ ತಂಡವು "ಖಚಿತವಾದ ರೋಗ ನಿಧಾರ್ನರಕ ನಿರ್ಣಯವನ್ನು" ಮಾಡಲಾರರು. ರೆಗ್ಗಿಯವರು ತಾವು ಸೂಚಿಸಿದಂತತಹ ನಿಜವಾಗಿಯೂ ಎರಡನೆಯ ವಿಚಾರವನ್ನು ಆಯ್ಕೆಮಾಡಿಕೊಂಡರು. [38]ಯೋಹಾನ 5:23ನ್ನು ನೋಡಿರಿ.

---

## ಪಾಠಗಳ ರೂಪರೇಷೆ

**ಪೀಠಿಕೆ**

A. ಸತ್ಯವು ಬಲು ಮುಖ್ಯವಾದದ್ದು (ಯೋಹಾನ 8:32; ಜ್ಞಾನೋಕ್ತಿ 23:23).
   1. ಸತ್ಯವು ದೇವರ ವಾಕ್ಯದ ಪುಟಗಳಲ್ಲಿ ಸಿಕ್ಕುತ್ತದೆ (ಯೋಹಾನ 17:17; 2 ಸಮುವೇಲ 7:28; ಕೀರ್ತನೆ 119:142, 151, 160).

2. ಸತ್ಯದೊಡನೆ ನಾವೇನು ಮಾಡಬೇಕು?
   a. ನೋಡಿರಿ: ಯೆರೆಮಿಾಯ 5:1; 1 ತಿಮೊಥೆ 4:3; 1 ಪೇತ್ರ 1:22; ಜೆಕರ್ಯ 8:16; ಎಫೆಸ 4:15; 1 ಅರಸು 2:4; 3:6; ಕೀರ್ತನೆ 86:11; ಯೋಹಾನ 3:21; 1 ಯೋಹಾನ 1:6; 1 ತಿಮೊಥೆ 3:15.
   b. ರೋಮಾಪುರ 1:18, 25, 28; ಗಲಾತ್ಯ 5:17; 2 ತಿಮೊಥೆ 3:8; 4:4; ತೀತ 1:4 ನೋಡಿರಿ.

B. ನಾವು 1 ಅರಸು 22ನ್ನು ಗಮನಿಸುವವರಾಗಿದ್ದೇವೆ.
   1. ಬೈಬಲ್ ಬಗೆಗಿನ ನಮ್ಮ ಭಾವನೆಗಳು ಮತ್ತು ಅಲಕ್ಷಿಸುವ ಮತ್ತು ಸತ್ಯವನ್ನು ತಿರಸ್ಕರಿಸುವ ಸಂಗತಿಗಳಿಂದಾಗಿ ಒಂದು ಶಕ್ತಿಯುತವಾದ ಪಾಠವು ಸಿಕ್ಕಿದೆ.
   2. ನಮ್ಮ ಪಾಠದ ಶೀರ್ಷಿಕೆಯ ವಚನ 16ರಲ್ಲಿದೆ.

I. ನಾವು ಸತ್ಯದೊಡನೆ ಆಟವಾಡಬಹುದು (22:1-17)
  A. ದೇವರ ಅಭಿಷಕ್ತನಾದ ಅರಸನು "ರಾಜಿ"ಯ ಆಟವನ್ನು ಆಡಿದನು (ವಚನಗಳು 1-4).
   1. ಯುದಾಯದ ಅರಸನು ಇಸ್ರಾಯೇಲಿನ ಅರಸನನ್ನು ಭೇಟಿಯಾದನು (ವಚನ 2) ಇದು ಅಸಂಗತವಾದ ಘಟನೆ.
      a. ಇಲ್ಲಿ ಎರಡು ಸಂಗತಿಗಳು ಸೂಚಿತವಾಗಿವೆ:
         (1) ಮದುವೆಯಿಂದ (2 ಪೂರ್ವಕಾಲ 18:1; ನೋಡಿರಿ 2 ಅರಸು 8:18, 27).
         (2) ಇಸ್ರಾಯೇಲ್ಯರೊಡನೆ ಸಮಾಧಾನದ ಒಪ್ಪಂದ (ವಚನ 44).
      b. ಯೆಹೋಷಾಫಾಟನ ಪ್ರೇರಣೆಗಳ ಉನ್ನತವಾಗಿದ್ದವ ಎಂಬುದರಲ್ಲಿ ಸಂಶಯವಿಲ್ಲ, ಆದರೆ ಆತನು ತತ್ವದಲ್ಲಿ ತಪ್ಪನ್ನು ಮಾಡಿದನು, ಮತ್ತು ಹೆಚ್ಚಾಗಿ ಸಂಗತಿಗಳಲ್ಲಿ ನಾಶಕರವಾದದ್ದನ್ನೇ ಮಾಡಿದನು.
   2. ಯೆಹೋಷಾಫಾಟನು ಆಹಾಬನೊಡನೆ ಸಿರಿಯಾದ ಮೇಲೆ ಯುದ್ಧಕ್ಕೆ ಹೋಗಲು ಒಪ್ಪಿಕೊಂಡನು (ವಚನಗಳು 3, 4), ಈ ನಿರ್ಧಾರವು ದೇವರಿಗೆ ಒಪ್ಪಿಗೆಯಾಗಿರಲಿಲ್ಲ (2 ಪೂರ್ವಕಾಲವೃತ್ತಾಂತ 19:2)!

  B. ಸುಳ್ಳುಪ್ರವಾದಿಗಳು "ಅವರಿಗೆ - ಏನು ಕೇಳಬೇಕೆನ್ನುತ್ತಾರೋ - ಅದನ್ನು - ಅವರಿಗೆ - ಹೇಳು ಎಂಬ ಆಟವನ್ನು" ಆಡಿದರು (ವಚನಗಳು 5-7).
   1. ಯೆಹೋಷಾಫಾಟನು ದೇವರನ್ನು ವಿಚಾರಿಸಲು ಸೂಚಿಸುತ್ತಾನೆ (ವಚನ 5), ಆಗ ಆಹಾಬನು ನಾನೂರು ಜನ ಪ್ರವಾದಿಗಳನ್ನು ಕರೆದನು (ವಚನ 6).
      a. ಇವರು ಆಹಾಬನ ಆಸ್ಥಾನದ ಪ್ರವಾದಿಗಳಾಗಿ ಉಳಿಸಿಕೊಂಡವರು ಆಗಿದ್ದು ಆಹಾಬನು ಬಯಸಿದ್ದನ್ನು ಹೇಳುವವರಾಗಿದ್ದರು.
      b. ಅವರ ಉತ್ತರವು ಅನಿಶ್ಚಿತವಾದುದಾಗಿತ್ತು. "ಕರ್ತನು" (ಅದೋನೈ) ಎಂಬುದನ್ನು ಯೆಹೋವನಿಗೆ ಬಳಸಿದಂತೆ ಬಾಳನಿಗೂ ಕೂಡಾ ಬಳಸಲಾಗುತ್ತಿತ್ತು.
   2. ಯೆಹೋಷಾಫಾಟನು ಇದರಿಂದ ತೃಪ್ತನಾಗಲಿಲ್ಲ ಮತ್ತು ಯೆಹೋವನ ಪ್ರವಾದಿಯನ್ನು ಕೇಳಲು ಹೇಳಿದನು (ವಚನ 7).

  C. ಅಧಾರ್ಮಿಕನಾದ ಅರಸನು "ನನಗೆ - ಒಪ್ಪಿಗೆಯಾಗುವವರೆಗೂ - ಸತ್ಯವು - ಬೇಕು ಎಂಬ ಆಟವನ್ನು" ಆಡಿದನು (ವಚನಗಳು 8-11).

1. ಮಿಕಾಯೇಹುವು ಯೇಹೋವನ ಪ್ರವಾದಿಯಾಗಿದ್ದನು, ಆದರೆ ಆಹಾಬನು "ಆತನು ನನಗೆ ಎಂದಿಗೂ ಶುಭವನ್ನು ಪ್ರವಾದಿಸದೇ ಕೆಟ್ಟದ್ದನ್ನೇ ಪ್ರವಾದಿಸಿದ್ದರಿಂದ ನಾನು ಆತನನ್ನು ದ್ವೇಷಿಸುತ್ತೇನೆ" ಎಂದು ಹೇಳಿದನು (ವಚನ 8).
   a. ಆಹಾಬನಿಗೆ ಕೇವಲ "ಹೌದಪ್ಪಗಳು" ಬೇಕಿತ್ತು (2 ತಿಮೊಥೆ 4:3, 4ನ್ನು ಗಮನಿಸಿರಿ).
   b. ಕೆಲಸಾರಿ ಸತ್ಯವು ನೋವನ್ನು ಉಂಟುಮಾಡುತ್ತದೆ!
2. ಮಿಕಾಯೆಹುವು ಕರೆಕಳುಹಿಸಿದಂತೆ (ವಚನ 9) ಈ ನಾನೂರು ಜನ ಪ್ರವಾ ದಿಗಳು ಆಹಾಬನಿಗೆ ಆತನು ಕೇಳಬಯಸಿದ್ದನ್ನು ಹೇಳಲು ಆರಂಭಿಸಿದರು (ವಚನಗಳು 10-12).
   a. ಈಗ ಅವರು ಅದನ್ನು ಯೆಹೋವನ ಹೆಸರಿನಲ್ಲಿ ಮಾತನಾಡಿದರು (ವಚನಗಳು 11, 12); ಯೆಹೋವನ ಹೆಸರನ್ನುಅವರು ಆರಾಧಿಸುತ್ತಿದ್ದ ದೇವರ ಉದ್ದವಾದ ಪಟ್ಟಿಯಲ್ಲಿ ಸೇರಿಸಿದ್ದರಲ್ಲಿ ಯಾವ ತೊಂದರೆಯೋ ಇರಲಿಲ್ಲ.
   b. ಒಬ್ಬನ ಹೆಸರು ಚಿದ್ಕೀಯ ಎಂದಿತ್ತು (ವಚನ 11).

D. ನಮ್ರವಾಗಿ ಮಾತನಾಡುವ ಕಂಚುಕಿಯು "ನಿನಗೆ - ಯಾವದು - ಒಳ್ಳೆಯದು - ಅನ್ನಿಸುತ್ತದೋ - ನನಗೆ - ಹೇಳು ಎಂಬ ಆಟವನ್ನು ಆಡಿದನು" (ವಚನ 13: ನೋಡಿರಿ ಯೆಶಾಯ 30:9, 10).

E. ಧೈರ್ಯವಂತನಾದ ಪ್ರವಾದಿಯು: "ಆಟವನ್ನು ಬಿಡು! ನಿನಗೆ ಏನು ಬೇಕೋ ಅದನ್ನು ನನಗೆ ಹೇಳು" ಅಂದನು (ವಚನಗಳು 14-17).
1. ಮಿಕಾಯೇಹುವಿನ ಆರಂಭದ ಪ್ರತಿಕ್ರಯಿಸುವಿಕೆಯು (ವಚನ 15) ವಚನ 16ರ ಸುಂದರವಾದ ಭಾವನೆಯನ್ನು ಕೆಣಕುವಂತದ್ದೇ ಆಗಿತ್ತು. ಓಹ್, ಎಲ್ಲಾ ಕೇಳುಗರು ದೇವರ ಸತ್ಯವನ್ನು ಮತ್ತು ಸತ್ಯವನಲ್ಲದೇ ಮತ್ತೆನನ್ನೂ ಅಲ್ಲ ಎಂಬುದನ್ನು ಅಳವಡಿಸಿಕೊಳ್ಳಬೇಕು!
2. ದೇವರ ಪ್ರವಾದಿಯು: "ಅದು ಹೇಗಿದೆಯೂ ಹಾಗೇ ಹೇಳಿದನು" (ವಚನ 17) ಆತನು ಆಹಾಬನ ಮರಣವನ್ನು ಪ್ರವಾದಿಸಿದನು.

II. ನಾವು ಸತ್ಯದೊಡನೆ ಆಟವಾಡಿದ್ದಾದರೆ ನಾವು ಕಳೆದುಕೊಳ್ಳುತ್ತೇವೆ (22:18-23)

A. ಆಹಾಬನು ಆಟವಾಡುವುದನ್ನು ಮುಂದುವರೆಸಿದನು (ವಚನ 18).

B. ಇದು ಬೈಬಲ್ಲಿನಲ್ಲಿಯ ಬಲಯುತವಾದ ಭಾಗವಾಗಿ ಕಂಡುಬರುತ್ತದೆ (ವಚನಗಳು 19-23).
1. ದೇವರ ಯಾರೊಬ್ಬರ ಸಲಹೆಯ ಸೂಚನೆಯ ಅವಶ್ಯಕತೆಯು ಇಲ್ಲದ್ದರಿಂದ (ರೋಮಾಪುರ 11:34, 35), ನಾವು ಈ ಕಥೆಯ ಪ್ರತಿಯೊಂದು ವಿವರಗಳನ್ನು ಅಕ್ಷರ ಸಹ ತೆಗೆದುಕೊಳ್ಳಲಾಗದು. ಆಹಾಬನ ಪ್ರವಾದಿಗಳೆಲ್ಲರು ಸುಳ್ಳುಗಾರರು ಎಂದು ಹೇಳುವದು ನಾಟಕೀಯ ರೀತಿಯಾಗಿದೆ.
2. ಒಬ್ಬನು ಸತ್ಯವನ್ನು ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿಸದಿದ್ದರೆ ದೇವರು ಅವನನ್ನು ಮೋಸಹೋಗುವುದಕ್ಕೆ ಒಪ್ಪಿಸುತ್ತಾನೆ, ಸುಳ್ಳನ್ನು ನಂಬುವದು ಒಂದೇ ಕಳೆದುಕೊಳ್ಳುವದೂ ಒಂದೇ! (ನೋಡಿರಿ 2 ಥೆಸಲೋನಿಕ 2:10-12.)

III. ನಾವು ಸತ್ಯವನ್ನು ತಿರಸ್ಕರಿಸಬಹುದು (22:24-28)

A. ಚಿದ್ಕೀಯನು ಸತ್ಯವನ್ನು ತಿರಸ್ಕರಿಸಿದನು (ವಚನಗಳು 24, 25).

1. ಮಿಕಾಯೆಹುವಿನ ಕಥೆಯ "ಮುಖ್ಯಭಾಗವನ್ನ" ಅರ್ಥಮಾಡಿಕೊಳ್ಳುವಲ್ಲಿ ಚಿದ್ಕೀಯನಿಗೆ ತೊಂದರೆಯಾಗಿತ್ತು (ವಚನ 24).

2. ವಚನ 25 ಬಹುಶಃ ಚಿದ್ಕೀಯನು ಆಹಾಬನ ಮರಣದ ನಂತರ ಈಜಬೇಲಳಿಂದ ಅಡಗಿಕೊಂಡನು ಎಂಬುದನು ಇದು ಸೂಚಿಸುವುದಾಗಿರಬಹುದು.

B. ಆಹಾಬನು ಸತ್ಯವನ್ನು ತಿರಸ್ಕರಿಸಿದನು (ವಚನಗಳು 26-28).

1. "ನಾನು ಸುರಕ್ಷಿತವಾಗಿ ಹಿಂತಿರುಗುವವರೆಗೂ" ಎಂದು ಆಹಾಬನ ಈ ಮಾತು ಎಚ್ಚರಿಕೆಯನ್ನು ತಿರಸ್ಕರಿಸಿತ್ತು.

2. ಮಿಕಾಯೇಹುವು ಅರಸನಿಗೆ - "ನಾನು ಸುರಕ್ಷಿತನಾಗಿ ಬರುವದಾದರೆ ನಾನು ನುಡಿದದ್ದು ಯೆಹೋವನ ಮಾತಲ್ಲವೆಂದು ತಿಳಿದುಕೋ" ಎಂದು ಹೇಳಿದನು (ವಚನ 28; ಹಾಗೆಯೇ ಧರ್ಮೋಪದೇಶಕಾಂಡ 18:20-22 ನೋಡಿರಿ).

IV. ಒಂದು ವೇಳೆ ನಾವು ಸತ್ಯವನ್ನು ನಿರಾಕರಿಸದ್ದೇ ಆದರೆ ನಾಶನವು ನಿಸ್ಸಂಶವಾದದ್ದು (22:29-39)

A. ಹೋರಾಡಬೇಕಾದ ಒಂದು ಯುದ್ಧ (ವಚನಗಳು 29-33)

1. ನಿಸ್ತೇಜನನಾದ ಆಹಾಬನು ಯೆಹೋಷಾಫಾಟನಿಗೆ ರಾಜವಸ್ತ್ರಗಳನ್ನು ಹಾಕಿಕೊಳ್ಳಲು ಹೇಳಿ ತಾನು ಸಾಮಾನ್ಯ ಸೈನಿಕನಂತೆ ವೇಷಮರೆಸಿಕೊಂಡನು (ವಚನಗಳು 29, 30).

2. ಬೆನ್ಹದದನ ಅಧಿಪತಿಗಳು ಯೆಹೋಷಾಫಾಟನನ್ನು ಆಹಾಬನು ಎಂದು ಕೊಂಡರು, ಆದರೆ ಯೆಹೋವನು ಆತನನ್ನು ರಕ್ಷಿಸಿದನು (ವಚನಗಳು 31-33; 2 ಪೂರ್ವಕಾಲವೃತ್ತಾಂತ 18:31).

B. ಮರಣವು ಮುಂತಿಳಿಸಲ್ಪಟ್ಟಿತ್ತು (ವಚನಗಳು 34-39)

1. ಸುತ್ತಲೂ ಸಿಡಿಯುತ್ತಿದ್ದ ಬಾಣವು ಆಹಾಬನ ಕವಚವನ್ನು ಸೀಳಿತು ಮತ್ತು ಆತನ ರಕ್ತನಾಳಗಳಿಗೆ ನಾಟಿತು (ವಚನ 34).

2. ಆಹಾಬನು ಯುದ್ಧಭೂಮಿಯನ್ನು ಬಿಟ್ಟು ಹೋಗಲು ಪ್ರಯತ್ನಿಸಿದನು (ವಚನ 34) ಆದರೆ ಹಾಗೆ ಮಾಡಲಾಗಲಿಲ್ಲ (ವಚನ 35). ಆತನು ತನ್ನ ರಥಕ್ಕೆ ಆತುಕೊಂಡು ಸತ್ತನು (ವಚನ 35; 2 ಪೂರ್ವಕಾಲವೃತ್ತಾಂತ 18:34). ಆತನ ದೇಹವನ್ನು ಸಮಾರ್ಯಕ್ಕೆ ಒಯ್ದರು (ವಚನ 37).

3. ರಕ್ತಸಿಕ್ತವಾದ ರಥವನ್ನು ತೊಳೆಯಲು ಹತ್ತಿರದಲ್ಲಿದ್ದ ಕೆರೆಗೆಹೋದರು "ದೇವರ ಮಾತಿನಂತೆ ... ನಾಯಿಗಳು ಆತನ ರಕ್ತವನ್ನು ನೆಕ್ಕಿದವು ..." (ವಚನ 38).

**ಮುಕ್ತಾಯ**

A. ಆಹಾಬನ ದುರಂತ ಕಥೆಯು ಬಲು ಕಠಿಣ ಹೃದಯವನ್ನೂ ಕೂಡಾ ಒಪ್ಪಿಸುವಂತದ್ದಾಗಿದ್ದು ಅದು ನಾವು ಸತ್ಯದ ಬಗೆಗೆ ಮತ್ತು "ಸತ್ಯವಲ್ಲದೇ ಮತ್ತೇನಲ್ಲದ್ದರ" ಬಗೆಗೆ ಲಕ್ಷಹರಿಸುವವರಾಗಿರಲೇಬೇಕು ಎಂದು ತಿಳಿಸುತ್ತದೆ.

B. ನಾನೇ ... ಸತ್ಯವಾಗಿದ್ದೇನೆ ಎಂದು ಯೇಸು ಹೇಳಿದನು (ಯೋಹಾನ 5:23; 14:6). "ಸತ್ಯವು ಯೇಸುವಿನಲ್ಲಿದೆ" (ಎಫೆಸ 4:21; ಯೋಹಾನ 16:13) ಎಂದು ಪೌಲನು ಒತ್ತಿಹೇಳಿದನು.